UASB
LIBRARY
Newspaper Clippings
Pg .1 Monday 15-11-2021 Jai Kisan



ಥಾವರ್‌ಚಂದ್ ಗೆಹ್ಲೋತ್ ಸಲಹೆ | ಸಮಾರೋಪ ಸಮಾರಂಭದಲ್ಲಿ ಭಾಗಿ

ಕೃಷಿಯತ್ತ ಯುವಜನರ ಸೆಳೆಯಬೇಕು

ಬೆಂಗಳೂರು: ಕೃಷಿ ವಲಯದಲ್ಲಾಗಿರುವ ಬೆಳವಣಿಗೆ ಕುರಿತಾಗಿ ತಿಳಿಸಿಕೊಡುವ ಮೂಲಕ ಯುವಕರನ್ನು ಕೃಷಿಯಡೆಗೆ ಸೆಳೆಯುವಂತೆ ಮಾಡಬೇಕಾದಲ್ಲಿ ಕೃಷಿಮೇಳ ಅತ್ಯವಶ್ಯಕವಾಗಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಹೇಳಿದ್ದಾರೆ.

ಜಿಕೆವಿಕೆಯಲ್ಲಿ ಆಯೋಜಿಸಿದ್ದ ಕೃಷಿಮೇಳದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು. ನಮ್ಮ ದೇಶ ಕೃಷಿ ಆಧಾರಿತವಾಗಿದ್ದು, ಕೃಷಿಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತೇವೆ. ಈ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆಗಳು ನಡೆಯುತ್ತಿದ್ದು, ಜನರಿಗೆ ತಿಳಿಸಿ ಯುವಕರಲ್ಲಿ ಕೃಷಿಯ ಬಗೆಗೆ ಒಲವು ಹೆಚ್ಚಾಗಬೇಕಾದಲ್ಲಿ ಈ ರೀತಿಯ ಮೇಳಗಳು ನಡೆಯಬೇಕು. ನಾನು ಚಿಕ್ಕ ವಯಸ್ಸಿನಲ್ಲಿ ನಮ್ಮ ಪಾಲಕರೊಂದಿಗೆ ಹಲವು ಮೇಳಗಳಲ್ಲಿ ಭಾಗವಹಿಸಿದ್ದೇನೆ ಎಂದರು.

» ಚಿಕ್ಕಂದಿನಲ್ಲಿ ನಾನೂ ಮೇಳಗಳಿಗೆ ಹೋಗ್ತಿದ್ದೆ...

ಈ ಹಿಂದೆ ಹಳ್ಳಿಗಳಲ್ಲಿ ಜಾತ್ರೆ ನಡೆಸುತ್ತಿದ್ದರು. ಇದರಲ್ಲಿ ಭಾಗವಹಿಸುವ ಮೂಲಕ ಸಂಪ್ರದಾಯ ಮುಂದುವರಿಸುವುದರ ಜತೆಗೆ ಪರಸ್ಪರ ಅರ್ಥ ಮಾಡಿಕೊಳ್ಳಲು ಸಹಾಯವಾಗುತ್ತಿತ್ತು. ಅದೇ ಮಾದರಿಯಲ್ಲಿ ಕೃಷಿ ಮೇಳದಲ್ಲಿ ಭಾಗವಹಿಸಿದರೆ, ಆಧುನಿಕ ತಂತ್ರಜ್ಞಾನ ಸೇರಿ ಕೃಷಿಯಲ್ಲಿ ಆಧುನಿಕ ಯಂತ್ರೋಪಕರಣಗಳ ಮಾಹಿತಿ ದೊರೆಯಲಿದೆ ಎಂದು ಹೇಳಿದರು.

ಕಳೆದ 57 ವರ್ಷಗಳಲ್ಲಿ ಬೆಂಗಳೂರು ಕೃಷಿ ವಿವಿ 200ಕ್ಕೂ ಹೆಚ್ಚು ಪ್ರಭೇದದ ತಳಿಗಳನ್ನು ಮತ್ತು 334 ಇತರ ಕೃಷಿ ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಿದೆ. ಕೃಷಿ ವಿಸ್ತರಣೆಗೆ ಸಂಬಂಧಿಸಿದಂತೆ, ವಿಶ್ವ ವಿದ್ಯಾಲಯವು ವೇಗವನ್ನು ಹೊಂದಿಸುವ ಮತ್ತು ತರಬೇತು ದಾರರಾಗಿ ಪ್ರಮುಖ ಪಾತ್ರವನ್ನು ವಹಿಸಿದೆ. ವಿಶ್ವವಿದ್ಯಾಲಯವು ಅಭಿವೃದ್ಧಿಪಡಿಸಿದ ವಿಸ್ತರಣಾ ಮಾದರಿಯನ್ನು ದೇಶದಾದ್ಯಂತ ಅಳವಡಿಸಲಾಗಿದೆ. ಕೃಷಿ ವಿಜ್ಞಾನ ಕೇಂದ್ರವು ತಲಾ ಒಂದು ಗ್ರಾಮವನ್ನು ದತ್ತು ತೆಗೆದುಕೊಂಡು ಜಿಲ್ಲಾ ಮಟ್ಟದಲ್ಲಿ ಮಾದರಿ ಗ್ರಾಮವನ್ನಾಗಿ ಮಾರ್ಪಡಿಸುತ್ತಿರುವ ಕಾರ್ಯಕ್ಕೆ ಶ್ಲಾಘನೀಯ ಎಂದು ಹೇಳಿದರು.

ವಿವಿ ಕುಲಪತಿ ಡಾ. ರಾಜೇಂದ್ರ ಪ್ರಸಾದ್, ಕುಲಸಚಿವ ಡಾ. ಬಸವೇಗೌಡ, ವಿಸ್ತರಣಾ ನಿರ್ದೇಶಕರಾದ ಡಾ.ಎನ್. ದೇವಕುಮಾರ್, ಸಂಶೋಧನಾ ನಿರ್ದೇಶಕರಾದ ಡಾ.ಷಡಾಕ್ಷರಿ, ವ್ಯವಸ್ಥಾಪನಾ ಮಂಡಳಿ ಸದಸ್ಯ ರಾಮಾಂಜಿನಿ ಗೌಡ, ಅರವಿಂದ್, ಶ್ರೀರಾಮ್ ಮತ್ತಿತರರು ಉಪಸ್ಥಿತರಿದ್ದರು.



ಕೃಷಿಮೇಳದಲ್ಲಿ ಭಾನುವಾರ ಭಾಗವಹಿಸಿದ್ದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ರಾಗಿ ಬೆಳೆ ವೀಕ್ಷಿಸಿದರು. ಕೃಷಿ ವಿವಿ ಕುಲಪತಿ ಡಾ.ಎಸ್. ರಾಜೇಂದ್ರ ಪ್ರಸಾದ್ ಜತೆಗಿದ್ದರು.

ರಾಜ್ಯಪಾಲರಿಗಾಗಿ ಜನರ ಹೊರಗೆ ಕಳಿಸಿದರು

ದೂರದ ಊರುಗಳಿಂದ ಆಗಮಿಸಿದ ಜನರು, ರೈತರು ಕೃಷಿ ವಿಶ್ವವಿದ್ಯಾಲಯದ ಹೊಸ ತಳಿಗಳ ಪ್ರಾತ್ಯಕ್ಷಿಕೆ ತಾಕುಗಳನ್ನು ವೀಕ್ಷಿಸಲು ಸಾಧ್ಯವಾಗದೆ ಬೇಸರದಿಂದ ಹೊರನಡೆದರು. ರಾಜ್ಯಪಾಲರು ತಾಕು ವೀಕ್ಷಣೆಗೆ ಆಗಮಿಸುತ್ತಾರೆ ಎಂದು ಗಂಟೆಗಟ್ಟಲೆ ಪ್ರವೇಶ ದ್ವಾರ ಬಂದ್ ಮಾಡಿದ್ದೇ ಇದಕ್ಕೆ ಕಾರಣ. ರಾಜ್ಯಪಾಲರು ಆಗಮಿಸುವ ಎರಡು ಗಂಟೆ ಮೊದಲೇ ಶಿಷ್ಟಾಚಾರ ನೆಪದಲ್ಲಿ ತಾಕು ವೀಕ್ಷಣೆ ಮಾಡುತ್ತಿದ್ದವರನ್ನು ಪೊಲೀಸರು ಹೊರಗೆ ಕಳುಹಿಸಿದರು. ಈ ನಡೆಯ ವಿರುದ್ಧ ಹಲವರು ಆಕ್ರೋಶ ವ್ಯಕ್ತಪಡಿಸಿದರು.

ಭಾರತೀಯ ಕೃಷಿಯಲ್ಲಿ ಅಭಿವೃದ್ಧಿ ಹೊಂದಲು ಉತ್ತಮ ಪದ್ಧತಿ ಅಗತ್ಯವಿದೆ. ರೈತಸ್ನೇಹಿ ಆ್ಯಪ್‌ಗಳ ಅಭಿವೃದ್ಧಿ ಮತ್ತು ಹೊಸ ಸ್ಟಾರ್ಟ್‌ಅಪ್‌ಗಳನ್ನು ಉತ್ತೇಜಿಸ ಆಗತ್ಯವಿದೆ. ರಾಜ್ಯದಲ್ಲಿ ಸಾಧನೆ ಮಾಡಿದ ಕೃಷಿಕರನ್ನು ಅಭಿನಂದಿಸಲು ಖುಷಿಯಾಗುತ್ತದೆ.
| ಥಾವರ್‌ಚಂದ್ ಗೆಹಲೋತ್ ರಾಜ್ಯಪಾಲ

ವಿಜಯವಾಣಿ ರೈತ ಮಿತ್ರ

ಬದನೆಯಲ್ಲಿ ಕುಡಿ ಮತ್ತು ಕಾಯಿ ಕೊರೆಯುವ ಹುಳುವಿನ ಸಮಗ್ರ ನಿರ್ವಹಣೆ ಹೇಗೆ?
| ನಾಗರಾಜು, ಮಾಸ್ತಿ ಕೋಲಾರ

ಉತ್ತರ: ಬೇವಿನ ಹಿಂಡಿಯನ್ನು ಸಸಿ ನಾಟಿ ಮಾಡುವಾಗ, 1 ತಿಂಗಳಿನ ನಂತರ ಮಣ್ಣಿಗೆ ಸೇರಿಸಬೇಕು. ಬಾಧೆಗೊಳಗಾದ ಕಾಯಿಗಳನ್ನು ನಿಯಮಿತವಾಗಿ ನಾಶಪಡಿಸುವುದು. ಪ್ರತಿ ಎಕರೆಗೆ 6-8 ಮೋಹಕ ಬಲೆಗಳನ್ನು ನಾಟಿ ಮಾಡಿದ 15 ದಿನಗಳ ನಂತರ ಅಳವಡಿಸುವುದು. ಹುಳುವಿನ ಬಾಧೆ ಕಂಡ ತಕ್ಷಣ ಮೂಲದ ಕೀಟನಾಶಕವಾದ ಆಜಾಡಿರಾಕ್ಟಿನ್ (10000 ಪಿಪಿಎಂ) 2 ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು. ತೀವ್ರತೆಗೆ ಅನುಗುಣವಾಗಿ ಕ್ಲೊರಾಂಟ್ರಿನಿಲಿಪ್ರೋಲ್ 18.5 ಎಸ್.ಸಿ. 0.4 ಮಿ.ಲೀ. ಅಥವಾ ಸ್ಪಿನೋಟರಂ 11.7 ಎಸ್.ಸಿ. 0.5 ಮಿ.ಲೀ. ಅಥವಾ ಫ್ಲುಬೆಂಡಿಯಾಮೈಡ್ 20 ಡಬ್ಲ್ಯು.ಡಿ.ಜಿ. 1 ಗ್ರಾಂ ಅನ್ನು ಪ್ರತಿ ಲೀ. ನೀರಿಗೆ ಮಿಶ್ರಣ ಮಾಡಿ ಸಿಂಪಡಣೆ ಮಾಡಬೇಕು.
| ಡಾ. ಬಿ. ಎಸ್. ರಾಜೇಂದ್ರ ಪ್ರಸಾದ್ ಕೀಟಶಾಸ್ತ್ರ ತಜ್ಞರು



ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು- ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

ತೋಟಗಳಲ್ಲಿ ಗೆದ್ದಲನ್ನು ನಿಯಂತ್ರಿಸುವುದು ಹೇಗೆ?
| ನಂದೀಶ್, ಹೊನ್ನಾಳಿ ರಾಣೆಬೆನ್ನೂರು

ಉತ್ತರ: ಗೆದ್ದಲಿನ ಗೂಡುಗಳನ್ನು ಗುರುತಿಸಿ ರಾಣಿ ಹುಳು ನಾಶಪಡಿಸಬೇಕು. ಇದರಿಂದಾಗಿ ಗೂಡಿನಲ್ಲಿನ ಎಲ್ಲ ಹಂತದ ಹುಳುಗಳು ಸಾಯುತ್ತವೆ. ಬೆಳೆಗಳಿಗೆ ಆಗಾಗ ನೀರು ಹಾಯಿಸುವುದರಿಂದ, ತೋಟಗಾರಿಕೆ ಬೆಳೆಗಳಲ್ಲಿ ಅಂತರ ಬೇಸಾಯ ಮಾಡುವುದರಿಂದ ಗೆದ್ದಲಿನ ಬಾಧೆ ಕಡಿಮೆ ಮಾಡಬಹುದು. ಹುತ್ತಗಳನ್ನು ನಿರ್ಮಿಸುವ ಗೆದ್ದಲನ್ನು ನಾಶಪಡಿಸಲು ಹುತ್ತಗಳಿಗೆ ವಿಷಪೂರಿತ ಕೀಟನಾಶಕ ಹಾಕಬೇಕು. (ಅ) 1 ಮೀಟರ್ ಸುತ್ತಳತೆ ಇರುವ ಹುತ್ತಕ್ಕೆ 2 ಅಲ್ಯುಮಿನಿಯಂ ಫಾಸ್ಫೈಡ್ ಮಾತ್ರೆ ಹಾಕಿ, ಗಾಳಿ ಹೊರ ಹೋಗದಂತೆ ರಂಧ್ರಗಳನ್ನು ಹಸಿ ಮಣ್ಣಿನಿಂದ ಮುಚ್ಚಬೇಕು. (ಆ) ಪ್ರತಿ ಲೀಟರ್ ನೀರಿಗೆ 5-10 ಮಿ.ಲೀ. ಕ್ಲೋರೋಪೈರಿಫಾಸ್ 20 ಇ. ಸಿ.ಯನ್ನು ಸೇರಿಸಿ ಪ್ರತಿ ಹುತ್ತಕ್ಕೆ 18 ಲೀ. ದ್ರಾವಣವನ್ನು ಸುರಿಯಿರಿ. ಬೆಳೆಗಳಲ್ಲಿ ಗೆದ್ದಲಿನ ಬಾಧೆ ಕಂಡುಬಂದಲ್ಲಿ ಪ್ರತಿ ಲೀ. ನೀರಿಗೆ 5 ಮಿ. ಲೀ. ಕ್ಲೋರೋಪೈರಿಫಾಸ್ 20 ಇ.ಸಿ.ಯನ್ನು ನೀರಿನ ಬಾಧೆಗೊಳಗಾದ ಪ್ರದೇಶದಲ್ಲಿ ಮಣ್ಣು ನೆನೆಯುವಂತೆ ಸಿಂಪಡಿಸಬೇಕು.
ಎಚ್ಚರಿಕೆ: ಅಲ್ಯುಮಿನಿಯಂ ಫಾಸ್ಫೈಡ್ ಅತ್ಯಂತ ವಿಷಕಾರಿ ಕೀಟನಾಶಕವಾಗಿದ್ದು, ಅದನ್ನು ಅತೀ ಜಾಗರೂಕತೆಯಿಂದ ಉಪಯೋಗಿಸಬೇಕು.
| ಬಿ. ಪ್ರಿಯಾಂಕ ಸಸ್ಯರೋಗ ತಜ್ಞರು

15-11-2021 Vv Pg 10

For more information visit
University Library Website
Web - uasbagrilibindia.org
E-mail- librarian@uasbangalore.edu.in

15-11-2021 Vv Pg 11

ಕೃಷಿಮೇಳಕ್ಕೆ ತೆರೆ: 8 ಲಕ್ಷ ಮಂದಿ ಭೇಟಿ

ಆನ್‌ಲೈನಲ್ಲಿ 38 ಲಕ್ಷ ಜನ ವೀಕ್ಷಣೆ | ₹4.25 ಕೋಟಿ ವಹಿವಾಟು | ಕಡಕ್‌ನಾಥ್ ಕೋಳಿಗೆ ಮುಗಿಬಿದ್ದ ಜನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅನ್ನದಾತರು, ಆಸಕ್ತರು ಸೇರಿದಂತೆ ಲಕ್ಷಾಂತರ ಜನರ ವೀಕ್ಷಣೆಗೆ ಸಾಕ್ಷಿಯಾಗಿದ್ದ ಕೃಷಿಮೇಳಕ್ಕೆ ಭಾನುವಾರ ತೆರೆ ಬಿತ್ತು. ಗುರುವಾರ ಮೇಳಕ್ಕೆ ಚಾಲನೆ ದೊರೆತಿದ್ದು ಎಡೆಬಿಡದೆ ಸುರಿದ ಮಳೆಯ ನಡುವೆಯೂ ಒಟ್ಟಾರೆ 8 ಲಕ್ಷಕ್ಕೂ ಅಧಿಕ ಜನ ಭೌತಿಕವಾಗಿ ಹಾಗೂ 38.11 ಲಕ್ಷ ಜನ ಆನ್‌ಲೈನ್‌ನಲ್ಲಿ ಮೇಳ ವೀಕ್ಷಿಸಿದ್ದಾರೆ.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಗುರುವಾರ ಮೇಳಕ್ಕೆ ಚಾಲನೆ ನೀಡಿದ್ದು ಗುರುವಾರ ಮತ್ತು ಶುಕ್ರವಾರ ಮಳೆ ಬಿಡದೇ ಸುರಿದರೂ ಕ್ರಮವಾಗಿ 66ಸಾವಿರಮತ್ತು1.70 ಲಕ್ಷಜನಹಾಜರಾಗಿದ್ದರು. ಶನಿವಾರ ಮಧ್ಯಾಹ್ನದವರೆಗೂ ಮಳೆ ಬಿಡುವು ನೀಡಿದ್ದು ವಾರಾಂತ್ಯ ಆಗಿದ್ದರಿಂದ 3 ಲಕ್ಷ ಜನ ಮೇಳದ ಸೊಬಗನ್ನು ಕಣ್ತುಂಬಿಕೊಂಡಿದ್ದರು. ಭಾನುವಾರವೂ ಹೆಚ್ಚಿನ ಸಂಖ್ಯೆ ನಿರೀಕ್ಷಿಸಲಾಗಿತ್ತಾದರೂ 2.64 ಲಕ್ಷ ಜನರಷ್ಟೇ ಮೇಳದತ್ತ ಹೆಜ್ಜೆ ಹಾಕಿದ್ದಾರೆ. ಭಾನುವಾರ ಮಳೆ ಬಿಡುವು ನೀಡಿದ್ದರೂ ಜಿಕೆವಿಕೆಯತ್ತ ತೆರಳಿದವರ ಸಂಖ್ಯೆ ಶನಿವಾರಕ್ಕಿಂತ ಕಡಿಮೆ ಇತ್ತು.

2019ರಲ್ಲಿ 14 ಲಕ್ಷ ಜನ ವೀಕ್ಷಣೆ: ನಾಲ್ಕು ದಿನದಲ್ಲಿ ಮಳೆಗಳಲ್ಲಿನ ವ್ಯಾಪಾರ ಸೇರಿದಂತೆ ಒಟ್ಟು 4.25 ಕೋಟಿ ರು. ವಹಿವಾಟು ನಡೆದಿದೆ. ಕೃಷಿ ವಿವಿಯ ರಿಯಾಯಿತಿ ಊಟದ ಹಾಲ್‌ನಲ್ಲಿ ಭಾನುವಾರ 7 ಸಾವಿರ ಜನರು ಮುದ್ದೆ ಊಟ ಸೇವಿಸಿದ್ದಾರೆ. ಗುರುವಾರ 8 ಸಾವಿರ, ಶುಕ್ರವಾರ 7 ಸಾವಿರ, ಶನಿವಾರ 8 ಸಾವಿರ ಮಂದಿ ಊಟ ಮಾಡಿದ್ದರು.

ಕಡಕ್‌ನಾಥ್ ಕೋಳಿ ಖರೀದಿ: ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿ ಜನರು ಕೋಳಿ ಖರೀದಿಗೆ ಮುಂದಾಗಿದ್ದರು, ಆದರೆಲ್ಲಾ ಮಧ್ಯಪ್ರದೇಶದ ಕಡುಗಪ್ಪು ಕಡಕ್‌ನಾಥ್ ಕೋಳಿಗಳನ್ನು ಖರೀದಿಸಿದರು. ಕೆ.ಜಿ.ಗೆ550 ರು.ನಂತೆ ಮಾರಾಟ ಮಾಡಲಾಗುತ್ತಿದ್ದು, ಕೋಳಿ ಹಿಡಿದುಕೊಂಡು ಹೋಗುತ್ತಿದ್ದವರನ್ನು 'ಎಲ್ಲಿ ಮಾರಾಟ ಮಾಡುತ್ತಿದ್ದಾರೆ' ಎಂದು ಬಹಳಷ್ಟು ಜನ ವಿಚಾರಿಸಿದ್ದು ಕಂಡುಬಂತು. ಪೋಷಕರ ಜೊತೆ ಮಕ್ಕಳೂ ಬಂದಿದ್ದರಿಂದ ಕುರುಕಲು ತಿಂಡಿ, ಐಸ್ ಕ್ರೀಂ, ಸಿಹಿ ತಿನಿಸು ಸವಿಯುವವರ ಸಂಖ್ಯೆ ಹೆಚ್ಚಾಗಿತ್ತು. ಮಾರಾಟಗಾರರೂ ವ್ಯಾಪಾರ ಪರವಾಗಿಲ್ಲ ಎಂದರು.

2019ರಲ್ಲಿ ನಡೆದ ಕೃಷಿ ಮೇಳಕ್ಕೆ 14 ಲಕ್ಷ ಜನ ಆಗಮಿಸಿದ್ದರು. 2020ರಲ್ಲಿ ಕೊರೋನಾ ಹಿನ್ನೆಲೆಯಲ್ಲಿ ಮೇಳವನ್ನು 2 ದಿನಕ್ಕೆ ಸೀಮಿತಗೊಳಿಸಲಾಗಿತ್ತು, ಸೋಂಕಿನ ಭೀತಿಯಿಂದಾಗಿ ಜನ ಜಿಕೆವಿಕೆಯತ್ತ ತೆರಳರಲಿಲ್ಲ. ಕೇವಲ 9 ಸಾವಿರ ಜನರಷ್ಟೇ ಕೃಷಿ ಮೇಳಕ್ಕೆ ಆಗಮಿಸಿದ್ದರು.



ಜಿಕೆವಿಕೆ ಆವರಣದಲ್ಲಿ ನಡೆದ ಕೃಷಿಮೇಳದಲ್ಲಿ ಭಾನುವಾರ ಕಂಡುಬಂದ ಜನ ಸಮೂಹ.

ಹಲಸಿನ ಸಸಿಗೆ ಭರ್ಜರಿ ಬೇಡಿಕೆ

ಈ ಬಾರಿ ಮೇಳದಲ್ಲಿ ವಿವಿಧ ತಳಿಯ ಹಲಸಿನ ಸಸಿಗಳಿಗೆ ಜನರು ಮುಗಿಬಿದ್ದು ಖರೀದಿಸಿದರು. 20ಕ್ಕೂ ಅಧಿಕ ನರ್ಸರಿಯವರು ವಿವಿಧ ಸಸಿಗಳನ್ನು ಮಾರಾಟ ಮಾಡುತ್ತಿದ್ದು ಬಹುತೇಕರ ಬಳಿ ಹಲಸಿನ ಸಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟವಾಗಿವೆ. ಕೋಲಾರದ ಬೋಜರವಳ್ಳಿಯ ಶಿವಾ ನರ್ಸರಿ, ಶಿವಮೊಗ್ಗದ ಸಕ್ರೆಬೈಲಿನ ವರಶ್ರೀ ಫಾರಂ ಮತ್ತು ನರ್ಸರಿ, ಬೆಂಗಳೂರು ಉತ್ತರ ತಾಲೂಕಿನ ಮುತ್ತಗದಹಳ್ಳಿಯ ಹಿತಕಾರಿ ನರ್ಸರಿ, ಯಲಹಂಕದ ಕತ್ತಿಗಾನಹಳ್ಳಿಯ ಬೆಂಗಳೂರು ನರ್ಸರಿ, ತುಮಕೂರಿನ ಗುಬ್ಬಿಯ ಸೀಗೇನಹಳ್ಳಿಯ ಸಿದ್ದು ನರ್ಸರಿ ಸೇರಿದಂತೆ ಬಹಳಷ್ಟು ನರ್ಸರಿಗಳಲ್ಲಿ ಹಲಸಿನ ಸಸಿ ಮಾರಾಟ ಜೋರಾಗಿತ್ತು. ಭೈರಚಂದ್ರ, ಸಿದ್ದು ಸಿಂಧೂರ, ನಾಗಚಂದ್ರ ತಳಗಳ ಸಸಿಗಳಿಗೆ ಹೆಚ್ಚು ಬೇಡಿಕೆ ಇತ್ತು.

ರೋಗ ನಿರೋಧಕ ಶಕ್ತಿ ಹೆಚ್ಚಿಸುವತ್ತ ಜನರ ಆಸಕ್ತಿ

ಕೊರೋನಾದ ಭೀಕರತೆ ಪರಿಣಾಮ ಜಿಕೆವಿಕೆಯಲ್ಲಿ ಏರ್ಪಡಿಸಿರುವ ಕೃಷಿಮೇಳಕ್ಕೆ ಆಗಮಿಸಿದವರಲ್ಲಿ ಬಹಳಷ್ಟು ಜನರು ಆಯುಷ್ ಇಲಾಖೆಯ ಮಳಿಗೆಗೆ ಭೇಟಿ ನೀಡಿ ಆರೋಗ್ಯ ಸಂಬಂಧಿ ಮಾಹಿತಿ ಹೆಚ್ಚಾಗಿ ಪಡೆದಿದ್ದಾರೆ. ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಇರುವ ಮಾರ್ಗಗಳ ಬಗ್ಗೆ ತಿಳಿದುಕೊಂಡಿದ್ದಾರೆ. ಮೇಳದಲ್ಲಿ 4 ಮಳಿಗೆಯನ್ನು ಆಯುಷ್ ಇಲಾಖೆಯಿಂದ ತೆರೆದಿದ್ದು ಆರೋಗ್ಯ ಸಂಬಂಧಿ ಮಾಹಿತಿ ಗಳನ್ನು ನೀಡುತ್ತಿದ್ದುದಲ್ಲದೇ ಕರಪತ್ರಗಳನ್ನೂ ನೀಡಿ ಜನರಿಗೆ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಗಿದೆ.

ರೈತರು ಹೊಸ ತಂತ್ರಜ್ಞಾನಗಳ ಕಲಿಯಬೇಕು: ರಾಜ್ಯಪಾಲ



ಜಿಕೆವಿಕೆಯಲ್ಲಿ ಆಯೋಜಿಸಿದ್ದ ಕೃಷಿ ಮೇಳದ ಸಮಾರೋಪ ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು 7 ಸಾಧಕರಿಗೆ ರಾಜ್ಯಮಟ್ಟದ ಪ್ರಶಸ್ತಿ ನೀಡಿ ಗೌರವಿಸಿದರು. ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ರಾಜೇಂದ್ರ ಪ್ರಸಾದ್, ಕುಲಸಚಿವರಾದ ಡಾ.ಬಸವೇಗೌಡ, ವಿಸ್ತರಣಾ ನಿರ್ದೇಶಕ ಡಾ.ಎನ್.ದೇವಕುಮಾರ್ ಮತ್ತಿತರರು ಹಾಜರಿದ್ದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೃಷಿಯಲ್ಲಿ ನ್ಯಾನೊ ತಂತ್ರಜ್ಞಾನ, ಡ್ರೋನ್ ಬಳಕೆ, ರೈತ ಸ್ನೇಹಿ ಆಪ್ಲಿಕೇಷನ್‌ಗಳ ಅಭಿವೃದ್ಧಿ, ಹೊಸ ಸ್ಟಾರ್ಟ್‌ಅಪ್‌ಗೆ ಉತ್ತೇಜನ ಸಿಗಬೇಕು. ಈ ನಿಟ್ಟಿನಲ್ಲಿ ನಾವು ಕಾರ್ಯೋನ್ಮುಖರಾದರೆ ಹೆಚ್ಚು ಇಳುವರಿ ಪಡೆಯಲು ಸಾಧ್ಯ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಅಭಿಪ್ರಾಯಪಟ್ಟರು. ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಭಾನುವಾರ ಏರ್ಪಡಿಸಿದ್ದ ಕೃಷಿ ಮೇಳದ ಸಮಾರೋಪ ಮತ್ತು ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು. 7 ಸಾಧಕರಿಗೆ ರಾಜ್ಯಮಟ್ಟದ ಕೃಷಿ ಪ್ರಶಸ್ತಿಗಳನ್ನು ರಾಜ್ಯಪಾಲರು ಪ್ರದಾನ ಮಾಡಿದರು. ಇದಕ್ಕೂ ಮುನ್ನ ರಾಜ್ಯಪಾಲರು ಕೃಷಿ ವಿವಿ ಅಭಿವೃದ್ಧಿಪಡಿಸಿರುವ 10 ಹೊಸ ತಳಿಗಳ ಪ್ರಾತ್ಯಕ್ಷಿಕೆ ತಾಕುಗಳನ್ನು ವೀಕ್ಷಿಸಿದರು. ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ರಾಜೇಂದ್ರ ಪ್ರಸಾದ್, ಕುಲಸಚಿವರಾದ ಡಾ.ಬಸವೇಗೌಡ, ವಿಸ್ತರಣಾ ನಿರ್ದೇಶಕ ಡಾ.ಎನ್.ದೇವಕುಮಾರ್, ಸಂಶೋಧನಾ ನಿರ್ದೇಶಕ ಡಾ.ಷಡಕ್ಷರಿ, ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ರಾಮಾಂಜಿನಿ ಗೌಡ, ಆರವಿಂದ್, ಶ್ರೀರಾಮ್ ಮತ್ತಿತರರು ಉಪಸ್ಥಿತರಿದ್ದರು.

7 ಸಾಧಕರಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ

ಮಾಜಿ ಪ್ರಧಾನಿ ದೇವೇಗೌಡ ಪ್ರಶಸ್ತಿಯನ್ನು ಹಾಸನದ ಎಂ.ಸಿ.ರಂಗಸ್ವಾಮಿ, ಡಾ.ಎಂ.ಎಚ್.ಮರಿಗೌಡ ಪ್ರಶಸ್ತಿಯನ್ನು ದೊಡ್ಡಬಳ್ಳಾಪುರದ ಆರವಿಂದ, ಬಾಗಲಕೋಟೆ ತೋಟಗಾರಿಕಾ ವಿವಿಯ ಸಂಶೋಧನಾ ನಿರ್ದೇಶಕ ಡಾ. ಮಹೇಶ್ವರಪ್ಪ, ಕ್ಯಾನ್ ಬ್ಯಾಂಕ್ ಪ್ರಶಸ್ತಿಯನ್ನು ಹಾಸನದ ವೈ.ಜಿ.ಮಂಜುಳಾ, ದೊಡ್ಡಬಳ್ಳಾಪುರದ ಸಿ.ನಿ. ವಿಕ್ರಮ್, ಡಾ.ಆರ್. ದ್ವಾರಕಿನಾಥ್ ಪ್ರಶಸ್ತಿಯನ್ನು ಕೋಲಾರದ ಮುನಿರೆಡ್ಡಿ, ದೊಡ್ಡಬಳ್ಳಾಪುರದ ಕೃಷಿ ವಿಜ್ಞಾನ ಕೇಂದ್ರದ ಡಾ.ಎ.ಪಿ.ಮಲ್ಲಿಕಾರ್ಜುನ ಅವರಿಗೆ ನೀಡಿ ಸನ್ಮಾನಿಸಲಾಯಿತು.

ಗ್ರಂಥಾಲಯ ಸಪ್ತಾಹ ನಿಮಿತ್ತ ಪುಸ್ತಕ ಪ್ರದರ್ಶನ

ಬೆಂಗಳೂರು: ರಾಜ್ಯ ಸಾರ್ವಜನಿಕ ಗ್ರಂಥಾಲಯ ಇಲಾಖೆಯಿಂದ ನಗರದ ಐದು ವಲಯಗಳ ನಗರ ಕೇಂದ್ರ ಗ್ರಂಥಾಲಯಗಳಲ್ಲಿ 'ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ-2021' ಆಚರಣೆ ನಡೆಯಿತು. ನಗರದ ಕಬ್ಬನ್ ಪಾರ್ಕ್‌ನಲ್ಲಿರುವ ರಾಜ್ಯಕೇಂದ್ರ ಗ್ರಂಥಾಲಯ ಹಾಗೂ ಆರ್.ಟಿ.ನಗರದ ಗ್ರಂಥಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪುಸ್ತಕ ಪ್ರದರ್ಶನ, ಮಾಜಿ ಪ್ರಧಾನಿ ದಿ. ಜವಾಹರ್‌ಲಾಲ್ ನೆಹರು ಜನ್ಮದಿನ ಹಾಗೂ ಮಕ್ಕಳ ದಿನಾಚರಣೆಗೆ ಇಲಾಖೆ ನಿರ್ದೇಶಕ ಡಾ.ಸತೀಶ್ ಕುಮಾರ್ ಎಸ್. ಹೊಸಮನಿ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ನಗರದ ಒಟ್ಟು 198 ವಾರ್ಡ್‌ಗಳ ಪೈಕಿ 205 ಗ್ರಂಥಾಲಯ ಕಾರ್ಯ ನಿರ್ವಹಿಸುತ್ತಿದ್ದು, ಇವುಗಳಲ್ಲಿ 100 ಗ್ರಂಥಾಲಯಗಳಲ್ಲಿ ಡಿಜಿಟಲ್ ಗ್ರಂಥಾಲಯ ಸೇವೆ ಲಭ್ಯವಿದೆ. ಓದುಗರು, ಸಾಹಿತ್ಯಾಸಕ್ತರು ವಿಶೇಷವಾಗಿ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುತ್ತಿರುವ ಅಭ್ಯರ್ಥಿಗಳು ಇದರ ಸದುಪಯೋಗ ಪಡಿಸಿಕೊಳ್ಳಬೇಕು. ರಾಜ್ಯದಲ್ಲಿ ಈವರೆಗೆ 1.88 ಕೋಟಿಗೂ ಹೆಚ್ಚು ಜನ ಡಿಜಿಟಲ್ ಗ್ರಂಥಾಲಯದ ಸದಸ್ಯರಾಗಿದ್ದಾರೆ ಎಂದರು. ಮಕ್ಕಳ ದಿನಾಚರಣೆ ಪ್ರಯುಕ್ತ ಮಕ್ಕಳಿಗೆ ರಸಪ್ರಶ್ನೆ, ಪ್ರಬಂಧ ರಚನೆ, ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ, ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ ನಡೆಯಿತು. 'ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ-2021'ಅಂಗವಾಗಿ ನ.14ರಿಂದ 20ರ ವರೆಗೆ ರಾಜ್ಯ ಎಲ್ಲ ಗ್ರಂಥಾಲಯಗಳಲ್ಲಿ ಪುಸ್ತಕ ಪ್ರದರ್ಶನ ನಡೆಯಲಿದೆ ಎಂದರು. ಇಲಾಖೆ ಉಪ ನಿರ್ದೇಶಕ ಪೂರ್ಣಿಮಾ, ಗ್ರಂಥಪಾಲಕರಾದ ಗಾಯತ್ರಿ, ಕಮಲಾ, ಗ್ರಂಥಾಲಯ ಸಹಾಯಕ ಪುಟ್ಟಯ್ಯ ಇದ್ದರು.

ರೈತರ ಜತೆ ಕೃಷಿ ಸಚಿವ ಬಿಸಿಪಾ ಹುಟ್ಟುಹಬ್ಬ

ಹಿರೇಕೆರೂರಿನ ಎಂ.ಕೆ.ಗ್ರಾಮದಲ್ಲಿ 'ರೈತರೊಂದಿಗೊಂದು ದಿನ' | ಅಲ್ಲೇ ಜನ್ಮದಿನಾಚರಣೆ

• **ಕನ್ನಡಪ್ರಭ ವಾರ್ತೆ** ಹಿರೇಕೆರೂರು

ಬೇಸಾಯದಲ್ಲಿ ವೈಜ್ಞಾನಿಕತೆ, ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಕೃಷಿಯನ್ನು ಲಾಭದಾಯಕವನ್ನಾಗಿಸಿಕೊಳ್ಳಬೇಕು. ರೈತರು ಒಂದೇ ಬೆಳೆಗೆ ಸೀಮಿತವಾಗದೇ ಬಹುಬೆಳೆ ಪದ್ಧತಿಯನ್ನು ಅಳವಡಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಸಲಹೆ ನೀಡಿದ್ದಾರೆ.

ತಾಲೂಕಿನ ಎತ್ತಿನಹಳ್ಳಿ ಎಂ.ಕೆ.ಗ್ರಾಮದಲ್ಲಿ ಕೃಷಿ ಸಚಿವ ಬಿ.ಸಿ.ಪಾಟೀಲ ಜನ್ಮದಿನದ ಅಂಗವಾಗಿ ಅವರ ಅಭಿಮಾನಿಗಳು ಆಯೋಜಿಸಿದ್ದ ರೈತರೊಂದಿಗೊಂದು ದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಸಮಗ್ರ ಕೃಷಿ ಪದ್ಧತಿ ಅನುಸರಿಸಿ ತರಕಾರಿ, ಹೂವು ಹಣ್ಣು ಬೆಳೆಯಲು ಮುಂದಾಗುವ ಮೂಲಕ ಆರ್ಥಿಕವಾಗಿ ಮತ್ತಷ್ಟು ಸದೃಢರಾಗಬೇಕು. ಸಮಗ್ರ ಕೃಷಿ ಜತೆ ಉಪ ಕಸುಬಿನಿಂದ ಆದಾಯ ಹೆಚ್ಚಿಸಿಕೊಳ್ಳಬೇಕು ಎಂದರು.

ಬಿಸಿಪಾಗೆ ಆದ್ಧೂರಿ ಸ್ವಾಗತ: ಇದಕ್ಕೂ ಮುನ್ನ ಗ್ರಾಮದ ಮುಖ್ಯ ಬೀದಿಯಲ್ಲಿ ಗೋವಿನಜೋಳದ ತೆನೆಗಳಿಂದ ಅಲಂಕರಿಸಿದ ಎತ್ತಿನ ಬಂಡಿಯಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ್‌ರನ್ನು ಮೆರವಣಿಗೆಯಲ್ಲಿ ಕರೆತರಲಾಯಿತು.



ಹಾವೇರಿ ಜಿಲ್ಲೆ ಹಿರೇಕೆರೂರಿನಲ್ಲಿ ಕೃಷಿ ಸಚಿವ ಬಿ.ಸಿ.ಪಾಟೀಲ್ ರೈತರ ಜೊತೆ ಹುಟ್ಟುಹಬ್ಬ ಆಚರಿಸಿಕೊಂಡರು.

ಶಿಳ್ಳೆ, ಚಪ್ಪಾಳೆ ಇದ್ದರೇನೇ ಬದುಕು: ಬಿ.ಸಿ.ಪಾಟೀಲ್

ಶಿಳ್ಳೆ, ಚಪ್ಪಾಳೆ ಇದ್ದರೇನೇ ಕಲಾವಿದರ ಜೀವನ. ಚಿತ್ರಮಂದಿರಗಳಲ್ಲಿ ಚಲನಚಿತ್ರಗಳನ್ನು ನೋಡುವ ಮೂಲಕ ಚಿತ್ರರಂಗವನ್ನು ಕಲಾವಿದರನ್ನು ಜನರು ಬೆಳೆಸಬೇಕು ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಹೇಳಿದರು. ಹಿರೇಕೆರೂರಿನಲ್ಲಿ ನಡೆದ ರೈತರೊಂದಿಗೊಂದು ದಿನ ವೇದಿಕೆ ಕಾರ್ಯಕ್ರಮದಲ್ಲಿ ಗರಡಿ ಚಿತ್ರದ ಚಿತ್ರೀಕರಣಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

6 ವರ್ಷ ಬಳಿಕ ಕಾಳುಮೆಣಸು ದರ ಕ್ವಿಂಟಲ್‌ಗೆ 50 ಸಾವಿರ ರು.

35 ಸಾವಿರದಿಂದ ಅರ್ಧ ಲಕ್ಷಕ್ಕೇರಿಕೆ | ರೈತರ ಹರ್ಷ

• **ಕನ್ನಡಪ್ರಭ ವಾರ್ತೆ** ಶಿರಸಿ

ಕಪ್ಪು ಬಂಗಾರ, ಆಪದ್ಧಾಂದವ ಬೆಳೆ ಎಂದೇ ಕರೆಸಿಕೊಳ್ಳುವ ಕಾಳುಮೆಣಸಿನ ದರ ಮತ್ತೆ ಏರಲಾರಂಭಿಸಿದೆ. ಆರು ವರ್ಷಗಳ ಹಿಂದೆ ದಾಖಲೆಯ ಬೆಲೆ ಕಂಡು ಬಳಿಕ ಕುಸಿತದ ಹಾದಿಯಲ್ಲಿದ್ದ ಕಾಳು ಮೆಣಸಿನದರ ಇದೀಗ ಏರಿಕೆಯ ಹಾದಿ ಹಿಡಿದಿದ್ದು, ಕ್ವಿಂಟಲ್ ಕಾಳುಮೆಣಸಿನ ದರ ಅರ್ಧ ಲಕ್ಷ ದಾಟಿದೆ. ಜನವರಿಯಲ್ಲಿಈದರಮತ್ತೆ ಏರಿಕೆಯಾಗುವ ನಿರೀಕ್ಷೆ ಇದೆ.

ಆರು ವರ್ಷದ ಹಿಂದೆ ಪ್ರತಿ ಕ್ವಿಂಟಲ್ ಕಾಳುಮೆಣಸಿಗೆ ದಾಖಲೆಯ ₹70 ಸಾವಿರ ದರ ಸಿಕ್ಕಿತ್ತು. ಇದರಿಂದಾಗಿ ವಿಯೆಟ್ನಾಂ, ಶ್ರೀಲಂಕಾದಿಂದ ಒಂದಿಷ್ಟು ಸಕ್ರಮವಾಗಿ, ಅಗಾಧ ಪ್ರಮಾಣದಲ್ಲಿ ಅಕ್ರಮವಾಗಿ ಕಾಳುಮೆಣಸು ಭಾರತ ಪ್ರವೇಶಿಸಿದ ಹಿನ್ನೆಲೆಯಲ್ಲಿ ನಂತರ ಬೆಲೆ ಭಾರೀ ಇಳಿಕೆ ಕಂಡಿತ್ತು. ಆ ಬಳಿಕಕೆಳುವವರೇ ಇಲ್ಲದಂತಾದ ನಮ್ಮ ಕಾಳು ಮೆಣಸಿನ ದರ ಪ್ರತಿ ಕ್ವಿಂಟಲ್‌ಗೆ ₹30-35 ಸಾವಿರ ತಲುಪಿತ್ತು. 40 ಸಾವಿರ ತಲುಪಿದರೆ ಅದೇ ಜಾಸ್ತಿ ಎನ್ನುವಂತಿತ್ತು.



4 ದಿನದ ಕೃಷಿಮೇಳಕ್ಕೆ ತೆರೆ » ಕೊನೆಯ ದಿನ ಕಿಕ್ಕಿರಿದಿದ್ದ ಜನ

8 ಲಕ್ಷ ಕೃಷಿಪ್ರಿಯರ ಭೇಟಿ



ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ಆಯೋಜಿಸಿದ್ದ ಕೃಷಿಮೇಳದ ಕೊನೆಯ ದಿನವಾದ ಭಾನುವಾರ ಆಪಾರ ಸಂಖ್ಯೆಯ ಸಾರ್ವಜನಿಕರು ಭೇಟಿ ನೀಡಿದ್ದರು.

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ಆಯೋಜಿಸಿದ್ದ ನಾಲ್ಕು ದಿನಗಳ 'ಕೃಷಿಮೇಳ- 2021'ಕ್ಕೆ ಭಾನುವಾರ ತೆರೆ ಬಿದ್ದಿದೆ.

ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಸಮಾರೋಪದಲ್ಲಿ ಭಾಗವಹಿಸಿ ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಭಾನುವಾರ ಬರೋಬ್ಬರಿ 2.64 ಲಕ್ಷ ಜನರು ಭೌತಿಕವಾಗಿ ಭಾಗವಹಿಸಿದ್ದರು. 18.29 ಲಕ್ಷ ಜನರು ಆನ್‌ಲೈನ್‌ನಲ್ಲಿ ವೀಕ್ಷಣೆ ಮಾಡಿದ್ದಾರೆ. ಒಟ್ಟಾರೆ ಈ ನಾಲ್ಕು ದಿನಗಳಲ್ಲಿ 4.25 ಕೋಟಿ ರೂ. ವಹಿವಾಟು ನಡೆದಿದೆ ಎಂದು ಕೃಷಿ ವಿವಿ ತಿಳಿಸಿದೆ.

ಧಾನ್ಯ ರಕ್ಷಕ ಬ್ಯಾಗ್‌ಗಳು

ಒಂದು ವರ್ಷದವರೆಗೆ ಯಾವುದೇ ಕೀಟಬಾಣ ಸುಳಿಯದಂತೆ ಆಹಾರ ಧಾನ್ಯಗಳನ್ನು ಸಂರಕ್ಷಿಸಲು ವಿಶೇಷ ಧಾನ್ಯರಕ್ಷಕ ಬೀಲಾಗಳು ಮಾರುಟ್ಟೆ ಬಂದಿವೆ. ಇವಿಎಚ್ ಪಾಲಿಥಿನ್ ಬ್ಯಾಗ್‌ಗಳಾದ ಒಬ್ಬ 25 ಕೆ.ಜಿ. ಯಿಂದ 100 ಕೆ.ಜಿ. ತೂಕದ ಸಾಮರ್ಥ್ಯ ಹೊಂದಿರುವುದು ವಿಶೇಷ.

ನೂತನ ಕೃಷಿ ಮಾದರಿಗಳ ಬಗ್ಗೆ ಮಾಹಿತಿ ಪಡೆಯಲು ಮಳಿಗೆಗಳ ಮುಂದೆ ಜನರು ಕಿಕ್ಕಿರಿದಿದ್ದರು. ಮಳೆಯಿಂದಾದ ಕೆಸರನ್ನು ಲೆಕ್ಕಿಸದೆ, ಆದರಲ್ಲೇ ಎಚ್ಚರಿಕೆಯಿಂದ ಹೆಜ್ಜೆ ಹಾಕಿ ಮೇಳದಲ್ಲೊಂದು ಸುತ್ತು ಹಾಕಿದ್ದು ಜನರಲ್ಲಿರುವ ಆಸಕ್ತಿಯನ್ನು ಎತ್ತಿ ತೋರಿಸುತ್ತಿತ್ತು.

ಭಾನುವಾರ 2.64 ಲಕ್ಷ ಜನರು ಭೌತಿಕವಾಗಿ ಭಾಗವಹಿಸಿದ್ದರು. 18.29 ಲಕ್ಷ ಜನರು ಆನ್‌ಲೈನ್‌ನಲ್ಲಿ ವೀಕ್ಷಣೆ ಮಾಡಿದರು. ಇದಕ್ಕೂ ಮುನ್ನ ಮೊದಲನೇ ದಿನ ಭೌತಿಕವಾಗಿ 60 ಸಾವಿರ ಮತ್ತು ಆನ್‌ಲೈನ್‌ನಲ್ಲಿ 1.55 ಸಾವಿರ, 2ನೇ ದಿನ 1.76 ಲಕ್ಷ ಹಾಗೂ ಆನ್‌ಲೈನ್‌ನಲ್ಲಿ 5.2 ಲಕ್ಷ, 3ನೇ ದಿನ 3 ಲಕ್ಷ ಮತ್ತು ಆನ್‌ಲೈನ್‌ನಲ್ಲಿ 12.96 ಲಕ್ಷ ಜನ ಭೇಟಿ ನೀಡಿದ್ದರು. ನಾಲ್ಕನೇ ದಿನ ಭೌತಿಕವಾಗಿ 2.64 ಲಕ್ಷ ಮತ್ತು ಆನ್‌ಲೈನ್‌ನಲ್ಲಿ 18.29 ಲಕ್ಷ ಜನರು ವೀಕ್ಷಿಸಿದರು. ಒಟ್ಟಾರೆ 4 ದಿನಗಳಲ್ಲಿ ಭೌತಿಕವಾಗಿ 8 ಲಕ್ಷ ಮತ್ತು ಆನ್‌ಲೈನ್‌ನಲ್ಲಿ 38.11 ಲಕ್ಷ ಜನರು ಭಾಗವಹಿಸಿದ್ದರು ಎಂದು ಕೃಷಿ ವಿವಿ ತಿಳಿಸಿದೆ.

ಹಿಟ್ಟಿನ ಗಿರಣಿಗಳು

ಗಿರಣಿ ಮತ್ತು ಎಣ್ಣೆ ತೆಗೆಯುವ ಯಂತ್ರಗಳು ಮೇಳದಲ್ಲಿ ಕಂಡುಬಂದವು. ಆಟೊಮ್ಯಾಟಿಕ್ ಹಿಟ್ಟಿನ ಗಿರಣಿ ಇದಾಗಿದೆ. ರಾಗಿ, ಗೋಧಿ, ಅಕ್ಕಿ ಇತ್ಯಾದಿ ಧಾನ್ಯಗಳನ್ನು ಹಿಟ್ಟು ಮಾಡಿಕೊಳ್ಳಬಹುದು. ಬೆಲೆ: ಸುಮಾರು 25 ಸಾವಿರ ರೂ.ಗಳು. ಎಣ್ಣೆ ತಯಾರಿಸುವ ಯಂತ್ರಗಳಿದ್ದು, ಮನೆಯಲ್ಲೇ ನಿಮಗೆ ಇಷ್ಟವಾದ ಎಣ್ಣೆ ಕಾಳುಗಳನ್ನು ಹಾಕಿದಲ್ಲಿ, ಅದೇ ಎಣ್ಣೆ ತೆಗೆದು ನೀಡಲಿದೆ. ಇದರ ಬೆಲೆ 23 ಸಾವಿರ ರೂ.ನಿಂದ 25 ಸಾವಿರ ರೂ.ಗಳು.

ಟ್ರ್ಯಾಕ್ಟರ್ ಮೂಲಕ ಕಾರು ಎಳೆದರು!

ಬೆಳಿಗ್ಗೆ ಮಳೆ ಇದ್ದರೂ ಲೆಕ್ಕಿಸದೆ ಬಹುತೇಕ ಜನರು ತಮ್ಮ ಸ್ವಂತ ವಾಹನಗಳಲ್ಲಿ ಮೇಳಕ್ಕೆ ಆಗಮಿಸಿದ್ದರು. ಮಳೆಯಿಂದ ಪಾರ್ಕಿಂಗ್ ಜಾಗದಲ್ಲಿ ಮಣ್ಣಿನ ಬದಿ ಹೆಚ್ಚಾಗಿ ಕಾರುಗಳನ್ನು ಹೊರತೆಗೆಯಲು ಸಾಧ್ಯವಾಗದೆ, ಟ್ರ್ಯಾಕ್ಟರ್‌ಗಳಲ್ಲಿ ಹಗ್ಗ ಕಟ್ಟಿಕಾರುಗಳನ್ನು ರಸ್ತೆಗೆ ತರಿಸಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು.



ಕೃಷಿಮೇಳಕ್ಕೆ ಆಗಮಿಸಿದ್ದ ವಾಹನಗಳಿಗಾಗಿ ಪಾರ್ಕಿಂಗ್ ವ್ಯವಸ್ಥೆ.

ಬೀದಿಬದಿ ವ್ಯಾಪಾರಿಗಳೇ ಹೆಚ್ಚು

ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಕೃಷಿಮೇಳದಲ್ಲಿ ಬೀದಿಬದಿ ವ್ಯಾಪಾರಿಗಳೇ ಹೆಚ್ಚಾಗಿದ್ದರು. ಮೇಳದ ಮಧ್ಯಭಾಗದಲ್ಲಿ ಸಾಲಾಗಿ ಅಂಗಡಿಗಳನ್ನು ಹಾಕಲಾಗಿತ್ತು. ಆದರೆ ಬಹುತೇಕ ಮಳಿಗೆಗಳು ಖಾಲಿ ಖಾಲಿಯಾಗಿದ್ದವು. ಮೇಳದ ಪ್ರವೇಶ ದ್ವಾರದಲ್ಲಿ ಹಾಗೂ ಮೇಳದ ಸುತ್ತಮುತ್ತ ಬೀದಿಬದಿ ವ್ಯಾಪಾರಿಗಳು ಹೆಚ್ಚಾಗಿದ್ದರು. ಮೇಳದ ಒಳಗೆ ಹೋಗಲು ಪ್ರವೇಶ ಶುಲ್ಕ ಇಲ್ಲದಿದ್ದರೂ ಬೀದಿಬದಿ ವ್ಯಾಪಾರಿಗಳಿಂದ ಪ್ರವೇಶ ಶುಲ್ಕ ವಸೂಲಿ ಮಾಡಲಾಗುತ್ತಿತ್ತು. ಜನರು ಹಳೆಗೆ ಕುರುಕಲು ತಿಂಡಿ ತಿನ್ನುತ್ತ ಮೇಳವನ್ನು ಸುತ್ತುತ್ತಿದ್ದರು.



ರಾಜ್ಯಪಾಲರಿಗೆ ಪೂರ್ಣಕುಂಭಸಹಿತ ಸ್ವಾಗತ ಕೋರಿದ ಯುವತಿಯರು.

ನಾಟಿ ಮಾಡುವ ಯಂತ್ರ

ನಾಟಿ ಮಾಡುವ ಬ್ಯಾಟರಿಚಾಲಿತ ಯಂತ್ರವನ್ನು ಹುಬ್ಬಳ್ಳಿಯ ಆಸಿಲ್ಲೋ ಮಷಿನ್ಸ್ ಪ್ರೈ.ಲಿ. ಸಿದ್ಧಪಡಿಸಿದೆ. ಪೈರುಗಳನ್ನು ಜೋಡಿಸಿ ಯಂತ್ರ ಆರಂಭಿಸಿದರೆ, ಸಾಲಿನಲ್ಲಿ ನಾಟಿ ಮಾಡುತ್ತ ಹೋಗಲಿದೆ. ಒಮ್ಮೆ ಚಾರ್ಜ್ ಮಾಡಿದರೆ ಕನಿಷ್ಠ 5-6 ಗಂಟೆ ಬಳಕೆ ಮಾಡಬಹುದು. ಇದರಿಂದ ರೈತರಿಗೆ ಕೂಲಿ ಉಳುಗಳ ಆಗತ್ಯವಿಲ್ಲ ಎನ್ನುತ್ತಾರೆ ಕಂಪನಿಯ ಸಿಇಒ ಪ್ರಜ್ವಲ್. ಇದರ ಬೆಜ್ಜೆ 35 ಸಾವಿರ ರೂ.ಗಳು. ಎಲೆಕ್ಟ್ರಿಕ್ ಪೌಡ್ಲಿ ರೇಕಿಂಗ್ ಯಂತ್ರವನ್ನು ಅನ್ವೇಷಿಸಿದ್ದು, ಕೋಳಿ ಸಾಕಣೆ ಸ್ಥಳವನ್ನು ಮೃದು ಮಾಡಲು ಉಪಯೋಗಿಸಲಾಗುತ್ತದೆ. ಇದು ಬ್ಯಾಟರಿಚಾಲಿತವಾಗಿದ್ದು, 3 ಇಂಚು ಆಳದಲ್ಲಿ ಮಣ್ಣನ್ನು ಮೃದು ಮಾಡಲಿದೆ. ಇದರ ಬೆಲೆ: 45 ಸಾವಿರ ರೂ.ಗಳು.

ಹಾವು ಹಿಡಿಯುಲು ಸುಲಭ ಸಾಧನ

ತೋಟ, ಹೊಲ, ಗದ್ದೆಗಳಲ್ಲಿ ಹಾವುಗಳು ಕಾಣಿಸಿಕೊಳ್ಳುವುದು ಸಾಮಾನ್ಯ. ಆ ಸಂದರ್ಭಗಳಲ್ಲಿ ಸುಲಭವಾಗಿ ಹಾವು ಹಿಡಿಯಲು ಈಜಿ ಲೈಡ್ ಕಂಪನಿ ಹೊಸ ಉಪಕರಣವನ್ನು ಅನ್ವೇಷಿಸಿದೆ. ದೂರದಲ್ಲೇ ನಿಂತು ಹಾವನ್ನು ಈ ಉಪಕರಣದ ಮೂಲಕ ಹಿಡಿದು ಅನಂತರ ಬೆರೆ ಕಡೆಗೆ ಬಿಡಬಹುದು. ಜತೆಗೆ ಮರ ಕತ್ತರಿಸಲು ಪುಟಾಣಿ ರಂಪಾಗಳು, ಕೃಷಿ ಕೆಲಸಕ್ಕೆ ಬೇಕಾದ ಇತರೆ ಉಪಕರಣಗಳನ್ನು ಈಜಿ ಲೈಡ್ ಕಂಪನಿಯವರು ಮಾರಾಟ ಮಾಡುತ್ತಿದ್ದಾರೆ.

Mandya farmer's quest to preserve agrarian heritage

Bore Gowda has won the Plant Genome Saviour Award

R. KRISHNA KUMAR
MYSURU

A farmer from Mandya has bagged the Plant Genome Saviour Award in recognition of his efforts to conserve the indigenous variety of paddy and agrarian heritage.

Meet S. Bore Gowda, a farmer from Shivalli in Mandya district, whose journey from a farmer engaged in farming practices that focused on use of chemical fertilizers to that of a rice conservator and seed saver, has won him a fan following.

It was an accidental fall and an injury in 1989 that was the turning point for Mr. Bore Gowda who was advised surgery. But he refused, got himself discharged against medical advice and took to yoga which gradually healed his injury. "While studying and practising yoga I was not only cured of the pain and injury but learnt that the food we eat also has a bearing on our health. As I delved deeper into the topic, I realised that the food we grow is laced with chemicals and hence switched over to organic and natural methods of farming," he said.

Over the years, he realised the rich agrarian tradition of the State and the country was getting obliterated owing to emphasis on monoculture and cultivation of high yielding varieties to the exclusion of indigenous paddy. His journey as a rice conservator began and by 2008 he not only had a sizeable collection of indigenous varieties of paddy but was now experimenting as rice breeder.



S. Bore Gowda and his wife Hemavathi on their farm at Shivalli in Mandya district. • SPECIAL ARRANGEMENT

"I crossed two varieties of rice to create a new one and named it 'Siddasanna' - after my father, Sidde Gowda, and mother, Sannamma," said Mr. Bore Gowda who is also known as 'Bhattada Bore Gowda' in his circles. "I knew nothing of crossing and breeding but was helped by Sahaja Samruddha, an organisation advocating cultivation and conservation of indigenous variety of seeds," he added. The Siddasanna variety has proved to be popular, and over 2,000 farmers are growing this variety which is easy to cultivate, resistant to pests and diseases, suitable for cultivation in different seasons and tastes good. Mr. Bore Gowda has also established a rice museum at his house in Shivalli where 210 varieties are on display. The museum, established in 2009, has a steady stream of visitors and both paddy grain and paintings of traditional agricultural systems are displayed.

In recognition of his contribution, Mr. Bore Gowda - who is also the Director of Desi Seeds Producer Company Ltd, a farmer-owned seed company - was awarded the Plant Genome Saviour Award instituted by Plant Varieties and Farmer's Rice Authority, Government of India in New Delhi last week.

15-11-2021 Hindu Pg 04

15-11-2021 Vv Pg 10

ರೈತರೊಂದಿಗೆ ಒಂದು ದಿನ ಕಾರ್ಯಕ್ರಮದಲ್ಲಿ ಬಿ.ಸಿ. ಪಾಟೀಲ್ ಹುಟ್ಟುಹಬ್ಬ ಆಚರಣೆ

ಕೃಷಿ ಕೈಗೊಳ್ಳಲು ಪ್ರೇರೇಪಣೆ ಅಗತ್ಯ

■ ವಿಜಯವಾಣಿ ಸುದ್ದಿಜಾಲ ಹಿರೇಕೆರೂರ

ರೈತರಲ್ಲಿ ಆತ್ಮಸ್ಥೈರ್ಯ ತುಂಬಿ, ಕೃಷಿ ಚಟುವಟಿಕೆಗಳಲ್ಲಿ ಧೈರ್ಯವಾಗಿ ತೊಡಗಿಕೊಳ್ಳುವಂತೆ ಪ್ರೇರೇಪಿಸುವುದು ಅಗತ್ಯವಿದೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು. ಹಿರೇಕೆರೂರ ವಿಧಾನಸಭೆ ಕ್ಷೇತ್ರದ ಚಿನ್ನಮುಳಗುಂದ ಗ್ರಾಮದಲ್ಲಿ ಬಿ.ಸಿ. ಪಾಟೀಲ ಅಭಿಮಾನಿ ಬಳಗ ಭಾನುವಾರ ಏರ್ಪಡಿಸಿದ್ದ ರೈತರೊಂದಿಗೆ ಒಂದು ದಿನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ರೈತರನ್ನು ಮುಖ್ಯವಾಹಿನಿಗೆ ತರಲು, ಯುವಕರನ್ನು ಕೃಷಿಯತ್ತ ಆಕರ್ಷಿಸಲು ರೈತರ ಯಶೋಗಾಥೆ ಪ್ರಚುರಪಡಿಸುವುದು ಅವಶ್ಯ. ರೈತರು ಅಳವಡಿಸಿಕೊಳ್ಳಬೇಕಾದ ತಾಂತ್ರಿಕತೆಗಳ ಬಗ್ಗೆ ಸಂವಾದ, ಕೃಷಿ, ಹೈನುಗಾರಿಕೆ, ಜೇನು ಸಾಕಾಣಿಕೆ ಸೇರಿ ವಿವಿಧ ಉಪಕಸುಬು ಕ್ಷೇತ್ರಗಳಲ್ಲಿ ಯಶಸ್ಸು ಕಂಡ ಪ್ರಗತಿಪರ ರೈತರ ಆನಿಸಿಕೆ ಮತ್ತು ಮಾಹಿತಿ ಹಂಚಿಕೊಳ್ಳುವ ಉದ್ದೇಶ ಒಳಗೊಂಡ ರೈತರೊಂದಿಗೆ ಒಂದು ದಿನ ಕಾರ್ಯಕ್ರಮ ಅತ್ಯಂತ ಯಶಸ್ಸು ಕಂಡಿದೆ. ರೈತರು ನೀಡಿದ ಸ್ವಾಗತ, ಚಕ್ಕಡಿ ಗಾಡಿಗಳು, ದನಕರುಗಳು, ಗ್ರಾಮಗಳನ್ನು ಸಿಂಗಾರಗೊಳಿಸಿರುವುದು ಇತಿಹಾಸ ಸೃಷ್ಟಿಸಿದೆ. ನನ್ನ ಜನ್ಮದಿನದಂದು ಅಭಿಮಾನಿಗಳು ಕಾರ್ಯಕ್ರಮ ಏರ್ಪಡಿಸಿದ್ದು ನಿಜಕ್ಕೂ ಶ್ಲಾಘನೀಯ ಎಂದರು.

ರಾಜ್ಯ ಉಗ್ರಾಣ ನಿಗಮ ಮಂಡಳಿ ಅಧ್ಯಕ್ಷ ಯು.ಬಿ. ಬಣಕಾರ ಮಾತನಾಡಿ, ಕ್ಷೇತ್ರದ ಜನತೆಯ ಆಶೀರ್ವಾದದಿಂದ ಕೃಷಿ ಸಚಿವ ಬಿ.ಸಿ. ಪಾಟೀಲ ಹುದ್ದೆ ಅಲಂಕರಿಸಿದ ಮೇಲೆ ಜಿಡ್ಡು ಹಿಡಿದಿದ್ದ ಕೃಷಿ ಇಲಾಖೆಗೆ ಹೊಸ ಆಯಾಮ ನೀಡಿದ್ದಾರೆ. ನಕಲಿ ಬಿತ್ತನೆ ಬೀಜ, ರೈತರಿಗೆ ವಂಚಿಸಿ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದ ರಸಗೊಬ್ಬರ ವಶಪಡಿಸಿಕೊಂಡು, ಅಕ್ರಮ ದಂಧೆಕೋರರ ವಿರುದ್ಧ ಕ್ರಮ ಕೈಗೊಂಡು ಮಹತ್ತರ ಬದಲಾವಣೆಗಳ ಮೂಲಕ ಯಶಸ್ವಿ ಹಾಗೂ ಮಾದರಿ ಕೃಷಿ ಮಂತ್ರಿಯಾಗಿದ್ದಾರೆ ಎಂದರು. ಇದಕ್ಕೂ ಮೊದಲು ಗ್ರಾಮದ ಆಗಸಿ ಬಾಗಿಲಿನಲ್ಲಿ ಸಚಿವ ಬಿ.ಸಿ. ಪಾಟೀಲ ಹಾಗೂ ಉಗ್ರಾಣ ನಿಗಮದ ಅಧ್ಯಕ್ಷ ಯು.ಬಿ. ಬಣಕಾರ ಅವರನ್ನು ಮುತ್ತೈದೆಯರು ಆರತಿ ಬೆಳಗಿ ಸ್ವಾಗತಿಸಿದರು.ಕಾರ್ಯಕ್ರಮದಲ್ಲಿ ಬಿ.ಸಿ. ಪಾಟೀಲ್ ತಮ್ಮ ಜನ್ಮದಿನವನ್ನು ಆಚರಿಸಿಕೊಂಡಿದ್ದು ವಿಶೇಷ.



ಹಿರೇಕೆರೂರ ತಾಲೂಕಿನ ಚಿನ್ನಮುಳಗುಂದ ಗ್ರಾಮದಲ್ಲಿ ರೈತರೊಂದಿಗೆ ಒಂದು ದಿನ ಕಾರ್ಯಕ್ರಮದಲ್ಲಿ ಸಚಿವ ಬಿ.ಸಿ. ಪಾಟೀಲ ಮಾತನಾಡಿದರು. ಸೃಷ್ಟಿ ಪಾಟೀಲ, ಜಿ.ಶಿವನಗೌಡ್ರ, ಎಸ್.ಎಸ್.ಪಾಟೀಲ ಇತರರಿದ್ದರು.

4 ದಿನದ ಕೃಷಿ ಮೇಳಕ್ಕೆ ತೆರೆ ₹4.25 ಕೋಟಿ ವಹಿವಾಟು



ಬೆಂಗಳೂರು: ಕೊರೋನಾ ಹಾಗೂ ಜಿಟಿ ಜಿಟಿ ಮಳೆಯ ನಡುವೆಯೇ 2021 ಸಾಲಿನ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕೃಷಿ ಮೇಳ ಭಾನುವಾರ ಸಂಪನ್ನಗೊಂಡಿತು.

ನ.11ರಂದು ಆರಂಭಗೊಂಡಿದ್ದ ಮೇಳಕ್ಕೆ ಮೊದಲೆರಡು ದಿನ ಮಳೆಯ ಕಾರಣದಿಂದ ನಿರೀಕ್ಷಿಸಿದಷ್ಟು ಜನರು ಆಗಮಿಸಿರಲಿಲ್ಲ. ವಾರಾಂತ್ಯ ಹಾಗೂ ಮಳೆ ಪ್ರಮಾಣ ತಗ್ಗಿದ ಹಿನ್ನೆಲೆ ಶನಿವಾರ ಮತ್ತು ಭಾನುವಾರ ಲಕ್ಷಾಂತರ ಜನರು ಕೃಷಿ ಮೇಳದಲ್ಲಿ ಭಾಗವಹಿಸಿದರು.

ಮೇಳದಲ್ಲಿ ಮೂರು ದಿನ ಕೃಷಿಯಲ್ಲಿ ನವೋದ್ಯಮಗಳು: ಅವಕಾಶಗಳು ಹಾಗೂ ಸವಾಲುಗಳು, ರೈತರ ಆದಾಯ ದ್ವಿಗುಣಗೊಳಿಸಲು ಇರುವ ಮಾರ್ಗಗಳು, ನಗರ ಕೃಷಿ – ಉತ್ತಮ ಆರೋಗ್ಯ, ಸ್ವಚ್ಛ ಪರಿಸರ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಾಗೋಷ್ಠಿ ಏರ್ಪಡಿಸಲಾಗಿತ್ತು.

೨

ಕೃಷಿ ಮೇಳಕ್ಕೆ ಸಂಭ್ರಮದ ತೆರೆ

ಸಂ.ಕ. ಸಮಾಚಾರ ಬೆಂಗಳೂರು

ನಾಲ್ಕು ದಿನಗಳ ಕಾಲ ಜರುಗಿದ ಕೃಷಿಮೇಳಕ್ಕೆ ರವಿವಾರ ತೆರೆಬಿದ್ದಿದೆ.

ಕೊರೊನಾ ಸೋಂಕಿನ ಹಿನ್ನೆಲೆಯಲ್ಲಿ ಕಳೆದ ವರ್ಷ ಕೃಷಿಮೇಳ ನಡೆದಿರಲಿಲ್ಲ. ಈಬಾರಿಯ ಕೃಷಿಮೇಳಕ್ಕೆ ಮೊದಲು ಎರಡು ದಿನ ಮಳೆಯ ಕಾಟವಿದ್ದರೂ ಹಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಿದ್ದರು. ಈ ಬಾರಿ ಕೃಷಿಮೇಳದಲ್ಲಿ ಒಟ್ಟು ಹತ್ತು ನೂತನ ತಳಿಗಳು ಅವುಗಳಲ್ಲಿ ಭತ್ತ-2, ಮೇವು, ಓಟ್ಸ್, ಹಲಸಿನಹಣ್ಣು, ಕಬ್ಬಿನ ತಳಿ, ಸಾಮೆ, ಗಳನ್ನು ಪರಿಚಯಿಸಲಾಯಿತು. ಅಲ್ಲದೇ 28 ಕೃಷಿ ತಂತ್ರಜ್ಞಾನ ತಳಿಗಳನ್ನು ಬಿಡುಗಡೆ ಮಾಡಲಾಯಿತು. ಈ ಬಾರಿಯ ಕೃಷಿಮೇಳದಲ್ಲಿ ನಿರೀಕ್ಷಿತ ರೇಷ್ಮೆ ಸುಧಾರಿತ ಬೆಳೆಗಳ ಪುಸ್ತಕವನ್ನು ಬಿಡುಗಡೆ ಮಾಡಲಾಗಿದ್ದು, ರೇಷ್ಮೆ ಬೆಳೆಗಾರರಿಗೆ ಒಂದೇ ಪುಸ್ತಕದಲ್ಲಿ ಎಲ್ಲ ಮಾಹಿತಿಗಳನ್ನೊಳಗೊಂಡ ಪುಸ್ತಕ ಇದಾಗಿದೆ.

ನಾಲ್ಕು ದಿನಗಳ ಕೃಷಿ ಮೇಳದ ನಾಲ್ಕು ದಿನಗಳಲ್ಲಿ 8 ಲಕ್ಷ ಮಂದಿ ಮೇಳಕ್ಕೆ ಭೇಟಿ ನೀಡಿ ವೀಕ್ಷಣೆ ಮಾಡಿದ್ದಾರೆ. ಮಳೆ ಹಿನ್ನೆಲೆಯಲ್ಲಿ ಮೊದಲ ದಿನ 66 ಸಾವಿರ ಮಂದಿ ಮಾತ್ರ ಮೇಳಕ್ಕೆ ಭೇಟಿ ನೀಡಿದ್ದರು. ಎರಡನೆ ದಿನ 1.70 ಲಕ್ಷ ಮಂದಿ ಭೇಟಿ ನೀಡಿದ್ದರೆ, ವಾರಾಂತ್ಯದ ದಿನ ಮಳೆಯ ನಡುವೆಯೂ ಮೂರನೇ ದಿನ 3 ಲಕ್ಷ ಮಂದಿ ಭೇಟಿ ನೀಡಿದ್ದರು. ಭಾನುವಾರ ಕೂಡಾ ವೀಕ್ಷಕರ ಸಂಖ್ಯೆ ಹೆಚ್ಚಬಹುದು ಎಂದು ಭಾವಿಸಲಾಗಿತ್ತು. ಆದರೆ ಬೆಳಿಗ್ಗೆ ಕೆಲವು ಪ್ರದೇಶದಲ್ಲಿ ಮಳೆ ಬಂದ ಹಿನ್ನೆಲೆಯಲ್ಲಿ ವೀಕ್ಷಕರ ಸಂಖ್ಯೆ ಸ್ವಲ್ಪ ಕಡಿಮೆಯಾಯಿತು. ಭಾನುವಾರ 2.64 ಲಕ್ಷ ಮಂದಿ ಮೇಳಕ್ಕೆ ಭೇಟಿ ನೀಡಿದ್ದರು. ಇನ್ನು ನಾಲ್ಕು ದಿನಗಳಲ್ಲಿ 38.11 ಲಕ್ಷ ಮಂದಿ ಸಾಮಾಜಿಕ ಜಾಲತಾಣದಲ್ಲಿ ಕೃಷಿ ಮೇಳವನ್ನು ವೀಕ್ಷಣೆ ಮಾಡಿದ್ದಾರೆ. ನಾಲ್ಕು ದಿನಗಳಲ್ಲಿ 4.25 ಕೋಟಿ ರೂ. ವಹಿವಾಟು ನಡೆದಿದೆ. ಮೂರನೆಯ ದಿನ ಹೆಚ್ಚಿನ ಮಂದಿ ಮೇಳಕ್ಕೆ ಆಗಮಿಸಿದ್ದರಿಂದ ಆ ಭಾಗದಲ್ಲಿ ವಾಹನ ಸಂಚಾರ ದಟ್ಟಣೆಯೂ ಉಂಟಾಗಿತ್ತು. ಇನ್ನು ವೀಕ್ಷಕರು ಕೃಷಿ ಮೇಳದಲ್ಲಿನ ಮಳಿಗೆಗಳಲ್ಲಿ ಇಡಲಾಗಿದ್ದ ವಿವಿಧ ತಳಿಯ ಬೆಳೆಗಳು, ಯಂತ್ರೋಪಕರಣಗಳು, ಹಣ್ಣು ತರಕಾರಿಯ ಬೆಳೆಗಳು, ಮನೆ ತಾರಸಿ ಮೇಲೆ ಬೆಳೆಯಬಹುದಾದ ಗಿಡಗಳು, ತರಕಾರಿ, ಹಣ್ಣುಗಳ ಕುರಿತಂತೆ ಮಾಹಿತಿ ಪಡೆದುಕೊಳ್ಳುತ್ತಿದ್ದುದು ಮಾತ್ರವಲ್ಲದೆ, ಆಹಾರ ಪದಾರ್ಥಗಳಲ್ಲಿ ತಯಾರಿಸಬಹುದಾದ ತಿಂಡಿ ತಿನಿಸುಗಳ ಬಗ್ಗೆ, ಹಲಸು, ಮಾವು, ಬಾಳೆ, ತೆಂಗು ಸೇರಿದಂತೆ ಇನ್ನಿತರ ತೋಟಗಾರಿಕೆ, ವಾಣಿಜ್ಯ ಬೆಳೆಗಳ ಬಗ್ಗೆ ಮಾಹಿತಿ ಪಡೆದುಕೊಂಡಿದ್ದೂ ಉಂಟು. ಒಟ್ಟಾರೆ ನವೆಂಬರ್ 11ರಿಂದ 14ರವರೆಗೆ ನಡೆದ ನಾಲ್ಕು ದಿನಗಳ ಕೃಷಿ ಮೇಳಯಕ ಕಂಡಿದೆ. ಕೊನೆಯ ದಿನ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಭೇಟಿನೀಡಿ ನೂತನ ತಳಿಗಳನ್ನು ವೀಕ್ಷಿಸಿದರು.



ಗಾಂಧಿಕೃಷಿ ವಿಜ್ಞಾನ ಕೇಂದ್ರದಲ್ಲಿ ಏರ್ಪಡಿಸಿದ್ದ ನಾಲ್ಕು ದಿನಗಳ ಕೃಷಿ ಮೇಳದ ಕೊನೆಯ ದಿನದಂದು ವೀಕ್ಷಣೆಗೆ ಆಗಮಿಸುತ್ತಿರುವ ಸಾರ್ವಜನಿಕರು.

- 8 ಲಕ್ಷ ಮಂದಿ ಕೃಷಿಮೇ ಳಕ್ಕೆ ಭೌತಿಕ ವೀಕ್ಷಣೆ
- 38.11 ಲಕ್ಷ ಜನರು ಸಾಮಾಜಿಕ ಜಾಲತಾಣದಲ್ಲಿ ವೀಕ್ಷಣೆ
- 10 ನೂತನ ತಳಿ, 28 ಕೃಷಿತಂತ್ರಜ್ಞಾನ ತಳಿ ಬಿಡುಗಡೆ
- ರೇಷ್ಮೆ ಸುಧಾರಿತ ಬೆಳೆಗಳ ಸಂಪೂರ್ಣ ಮಾಹಿತಿ
- ನಾಲ್ಕುದಿನಗಳಲ್ಲಿ 4.25 ಕೋಟಿ ರೂ ವಹಿವಾಟು

> ಭಾರತ ಕೃಷಿ ಆಧಾರಿತ ರಾಷ್ಟ್ರವಾಗಿದೆ. ಕೃಷಿ ಸಂಬಂಧಿತ ಜ್ಞಾನಾಭಿವೃದ್ಧಿಗಾಗಿ ಕೃಷಿ ಮೇಳ ಸಹಕಾರಿಯಾಗಲಿದೆ. ಇದರಿಂದ ಸಾವಿರಾರು ರೈತರು ಹಾಗೂ ನಾಗರಿಕರೂ ಅನುಕೂಲ ಪಡೆಯಲಿದ್ದಾರೆ.
>
> ■ ಥಾವರ್‌ಚಂದ್ ಗೆಹ್ಲೋಟ್ | ರಾಜ್ಯಪಾಲರು

15-11-2021 Sk Pg 05

15-11-2021 Hd Pg 01

ಕೃಷಿಕರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಕಿವಿಮಾತು

ಅಧಿಕ ಇಳುವರಿಗೆ ಬಹುಬೆಳೆ

ಬೆಂಗಳೂರು: ಭಾರತದ ಕೃಷಿ ಕ್ಷೇತ್ರ ವಿಕಾಸ ಹೊಂದಲು ಭಿನ್ನ ಭಿನ್ನವಾದ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಅಗತ್ಯವಿದೆ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಭಾನುವಾರ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಕೃಷಿ ಮೇಳದ ಸಮಾರೋಪ ಸಮಾರಂಭದಲ್ಲಿ ಆಧುನಿಕ ಬೇಸಾಯ ಪದ್ಧತಿಗಳ ಆಪ್ತ ಮಾರ್ಗದರ್ಶಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಕೃಷಿ ಮೇಳವು ಇತ್ತೀಚಿನ ಅಭಿವೃದ್ಧಿ ಹೊಂದಿದ ತಂತ್ರಜ್ಞಾನಗಳನ್ನು ಪ್ರದರ್ಶಿಸಲು ಮತ್ತು ಕೃಷಿ ವಲಯದ ಬೆಳವಣಿಗೆಗಳ ಕುರಿತು ರೈತ ಸಮುದಾಯಕ್ಕೆ ತಿಳಿಸಲು ಒಂದು ಅನನ್ಯ ಕಾರ್ಯಕ್ರಮವಾಗಿದೆ. ಈ ಮೇಳದಲ್ಲಿ ಕೃಷಿ, ಕೃಷಿ ಯಂತ್ರೋಪಕರಣಗಳು, ಸಾವಯುವ ಕೃಷಿ, ಪಶುಸಂಗೋಪನೆ, ಸ್ವಸಹಾಯ ಗುಂಪುಗಳು, ವಿವಿಧ ತಂತ್ರಜ್ಞಾನ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕೃಷಿ ಯೋಜನೆಗಳ ಮಾಹಿತಿ ಒದಗಿಸಲಾಗಿದೆ ಎಂದು ತಿಳಿಸಿದರು.

ಹಸಿರು ಕ್ರಾಂತಿಯಿಂದ ದೇಶ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿ ಆರ್ಥಿಕ ಪ್ರಗತಿ ಸಾಧಿಸಿತು. ಈಕ್ರಾಂತಿಯಿಂದಲೇ ಭಾರತವಿಶ್ವದಇತರ ಆರ್ಥಿಕವಾಗಿ ಪ್ರಭಲವಾಗಿರುವ ಇತರ ದೇಶಗಳಿಗೆ ಸರಿಸಮನಾಗಿ ನಿಂತಿದೆ. ಕೃಷಿ ಕ್ಷೇತ್ರ ಅಭಿವೃದ್ಧಿ ಹೊಂದಲು ಉತ್ತಮ ಕೃಷಿ ಪದ್ಧತಿ ಅಗತ್ಯವಿದೆ. ನ್ಯಾನೋ ತಂತ್ರಜ್ಞಾನ, ಕೃಷಿಯಲ್ಲಿ ಡ್ರೋನ್ ಗಳ ಬಳಕೆ, ನೀರಾವರಿಯರಲ್ಲಿ ಯಾಂತ್ರೀಕರಣ ನೈಸರ್ಗಿಕ ಮತ್ತು ಸಾವಯುವ ಕೃಷಿ, ರೈತ ಸ್ನೇಹಿ ಅಪ್ಲಕೇಶ್‌ಗಳನ್ನು ಅಭಿವೃದ್ಧಿಪಡಿಸುವ ಹಾಗೂ ಹೊಸ ಸ್ಟಾರ್ಟ್‌ಅಪ್‌ಗಳನ್ನು ಉತ್ತೇಜಿಸುವುದು ಅಗತ್ಯವಿದೆ ಎಂದು ರಾಜ್ಯಪಾಲರು ಅಭಿಪ್ರಾಯಪಟ್ಟರು.





> **ಕೊರೋನಾದಂತಹ ಸಂಕಷ್ಟದ ಸಮಯದಲ್ಲಿ ರೈತರಿಗೆ ಈ ಮೇಳದಿಂದ ಬಹಳಷ್ಟು ಅನುಕೂಲವಾಗಲಿದೆ. ರೈತರ ಮುಂದಿನ ಕೃಷಿ ಚಟುವಟಿಕೆಗಳಿಗೆ ಕೃಷಿ ಮೇಳ ಮಾರ್ಗದರ್ಶಿಯಾಗಲಿದೆ.**
>
> ■ ಡಾ.ಎಸ್.ರಾಜೇಂದ್ರ ಪ್ರಸಾದ್, ಕುಲಪತಿಗಳು ಕೃಷಿ ವಿಶ್ವವಿದ್ಯಾಲಯ

ಅತ್ಯುತ್ತಮ ಪ್ರಶಸ್ತಿ ಪ್ರದಾನ

ಎಂ.ಸಿ.ರಂಗಸ್ವಾಮಿ, ಟಿ.ಎಂ.ಅರವಿಂದ, ವೈ.ಜಿ. ಮಂಜುಳ, ಸಿ. ನವಿಕ್ರಮ್, ಮುನಿರೆಡ್ಡಿ, ಡಾ.ಎ.ಪಿ.ಮಲ್ಲಿಕಾರ್ಜುನಗೌಡ, ಎಚ್.ಪಿ. ಮಹೇಶ್ವರಪ್ಪ ಅವರಿಗೆ ರಾಜ್ಯಮಟ್ಟದ ಅತ್ಯುತ್ತಮ ಪ್ರಶಸ್ತಿಯನ್ನು ರಾಜ್ಯಪಾಲರು ಪ್ರದಾನ ಮಾಡಿದರು.

ಕಳೆದ 57 ವರ್ಷಗಳಲ್ಲಿ ವಿಶ್ವವಿದ್ಯಾನಿಲಯವು 200 ಕ್ಕೂ ಹೆಚ್ಚು ಪ್ರಭೇದಗಳನ್ನು ಮತ್ತು 334 ಇತರ ಕೃಷಿ ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಿದೆ. ಈ ವಿಶ್ವವಿದ್ಯಾನಿಲಯದ ಎಲ್ಲ ಕೃಷಿ ಕೇಂದ್ರಗಳು ತಲಾ ಒಂದು ಗ್ರಾಮವನ್ನು ದತ್ತು ತಗೆದುಕೊಂಡು ಜಿಲ್ಲಾ ಮಟ್ಟದಲ್ಲಿ ಮಾದರಿ ಗ್ರಾಮವನ್ನಾಗಿ ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ಕುಲಸಚಿವರಾದ ಡಾ.ಬಸವೇಗೌಡ, ವಿಸ್ತರಣಾ ನಿರ್ದೇಶಕ ಡಾ.ಎನ್.ದೇವಕುಮಾರ್, ಸಂಶೋಧನಾ ನಿರ್ದೇಶಕ ಡಾ.ಷಡಕ್ಷರಿ ಇದ್ದರು.

ಬೆಲೆ ಕುಸಿತದ ಆಘಾತ ತಪ್ಪಿಸಲು ಮತ್ತೊಂದು ದಾರಿ | ಮೈಸೂರಿನ ಸಿಎಫ್ ಟಿಆರ್‌ಐ ವಿಜ್ಞಾನಿಯ ಸಂಶೋಧನೆ

ಕಾಫಿ ಎಲೆಯಿಂದಲೂ ಆರೋಗ್ಯಕರ ಪಾನೀಯ

•ಕೆ.ಸಿ ಇಂದ್ರೇಶ್

ಮಡಿಕೇರಿ: ಕಾಫಿ ಬೆಳೆಗೆ ಆಗಾಗ ಸಂಭವಿಸುವ ಪ್ರಾಕೃತಿಕ ಆಘಾತ, ಮಾರುಕಟ್ಟೆಯಲ್ಲಿ ಬೆಲೆ ಕುಸಿತದಿಂದ ಬೆಳೆಗಾರರು ಕಂಗಾಲಾಗುವರು.



ಇದನ್ನು ತಪ್ಪಿಸಲು ಎಲೆಯಿಂದಲೂ ವಿವಿಧ ಬಗೆಯ ಆರೋಗ್ಯಕರ ಪಾನೀಯವನ್ನು ತಯಾರಿಸಬಹುದು ಎಂದು ಮೈಸೂರಿನ ಸಿಎಫ್ ಟಿಆರ್‌ಐ ವಿಜ್ಞಾನಿಯ ಮಹತ್ವದ ಸಂಶೋಧನೆ ನಡೆಸುವ ಮೂಲಕ ಬೆಳೆಗಾರರ ಆತಂಕ ನಿವಾರಣೆಗೆ ಪ್ರಯತ್ನವೊಂದು ನಡೆದಿದೆ.

ಲಾಕ್ ಡೌನ್ ಬಳಿಕ ಸಂಕಷ್ಟ: ಕೊರೋನಾ ಬಳಿಕ ಉಂಟಾದ ಲಾಕ್ ಡೌನ್‌ನಿಂದಾಗಿ ಕಾಫಿ ಬೆಳೆಗೆ ಸಾಕಷ್ಟು ಹೊಡೆತ ಬಿದ್ದಿತು. ಮಾರುಕಟ್ಟೆಯಲ್ಲಿ ಸೂಕ್ತ ಬೆಲೆ ಸಿಗದೆ ಬೆಳೆಗಾರರು ಮುಂದೇನು ಮಾಡುವುದು ಎಂಬ ಸ್ಥಿತಿ ತಲುಪಿತು. ಈ ಸಂದರ್ಭದಲ್ಲಿ ಕಾಫಿ ಬೆಳೆಗಾರರು ಅನುಭವಿಸಿದ ಆರ್ಥಿಕ ಸಂಕಷ್ಟವನ್ನು ಮನಗಂಡ ಮೈಸೂರಿನ ವಿಜ್ಞಾನಿಯಾದ ಪುಷ್ಪ ಎಸ್.ಮೂರ್ತಿ ಅವರ ನಿರಂತರ ಪರಿಶ್ರಮದ ಫಲ ಬೆಳೆಗಾರರ ಆಶಾಕಿರಣವಾಗಿದೆ.

ವರ್ಷವಿಡಿ ಪಾನೀಯ ತಯಾರಿಕೆ ಸಾಧ್ಯ: ಮೈಸೂರಿನ ಕೇಂದ್ರೀಯ ಆಹಾರ ಸಂಶೋಧನಾಲಯದ ಪ್ರಧಾನ ವಿಜ್ಞಾನಿ ಪುಷ್ಪಾ ಎಸ್. ಮೂರ್ತಿ ಅವರು ಕಾಫಿ ಎಲೆಯಿಂದಲೂ ಪಾನೀಯ ತಯಾರು ಮಾಡುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ. ಇದರಿಂದ ಮನುಷ್ಯನ ಆರೋಗ್ಯಕ್ಕೂ ಉಪಯುಕ್ತವಾಗಲಿದೆ ಎಂದು ಹೆಮ್ಮೆಯಿಂದ ಸಂಶೋಧನಾ ವಿಷಯವನ್ನು ಸುದ್ದಿಗಾರರೊಂದಿಗೆ ಹೇಳಿಕೊಂಡರು.

2019ರಿಂದಲೂ ಕಾಫಿ ಎಲೆ ಕುರಿತು ಸಂಶೋಧನೆ: ಕಾಫಿ ಎಲೆಯಿಂದ ಪಾನೀಯ ತಯಾರು ಮಾಡುವುದರಿಂದ ಬೆಳೆಗಾರರಿಗೆ ವರ್ಷವಿಡೀ ಆದಾಯ ಲಭಿಸಲಿದೆ. 2019 ರಿಂದಲೇ ತಾವು ಈ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸುತ್ತಿದೆ. ಇದಕ್ಕೆ ಕೇಂದ್ರ ಸರ್ಕಾರದ ಆಹಾರ ಸಂಸ್ಕರಣಾ ಕೈಗಾರಿಕೆಗಳ ಸಚಿವಾಲಯದಿಂದ ಅನುದಾನವನ್ನು ಪಡೆದುಕೊಳ್ಳಲಾಗಿದೆ ಎಂದು ವಿಜ್ಞಾನಿ ಪುಷ್ಪಾ ಎಸ್. ಮೂರ್ತಿ ಹೇಳಿದರು.

ಹಂಗಾಮಿನ ಬಲಿತ ಎಲೆಗಳ ಬಳಕೆ: ಕಾಫಿ ಬೀಜದ ಬೆಳವಣಿಗೆಗೆ ಅಡ್ಡಿಯಾಗದಂತೆ ರೈತರು ಹಿಂಗಾರು ಹಂಗಾಮಿನ ಸಮಯದಲ್ಲಿ ಬಲಿತ ಕಾಫಿ ಎಲೆಯನ್ನು ಬಳಸಿದರೆ, ಅದು ಕಾಫಿ ಬೆಳೆಗಾರರ ಆರ್ಥಿಕ ಅಭಿವೃದ್ಧಿ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ. ಇಂದು ಕಾಫಿ ಉದ್ಯಮದ ಸುಮಾರು 70 ಪ್ರತಿಶತದಷ್ಟು ಜನರು ಕಾಫಿ ಬೀಜಗಳ ಬೆಳವಣಿಗೆಯ ಚಕ್ರದ ಸ್ವರೂಪದಿಂದಾಗಿ ವರ್ಷದ ಒಂಭತ್ತು ತಿಂಗಳ ಕಾಲ ನಿರುದ್ಯೋಗಿಗಳಾಗಿರಬೇಕಾಗುತ್ತದೆ. ಆದರೆ, ಈ ಪಾನೀಯ ಯಶಸ್ವಿಯಾದರೆ ಕಾಫಿ ಬೆಳೆಗಾರರಿಗೆ ವರ್ಷಪೂರ್ತಿ ಉದ್ಯೋಗ ಲಭಿಸಲಿದೆ ಎಂದು ವಿವರಿಸಿದರು.



ಕಡಿಮೆ ಕೆಫೀನ್ ಅಂಶ ಹೊಂದಿದೆ: ಪುಷ್ಪಾ ಅವರ ಪ್ರಕಾರ ಎಲೆಯ ಸಾರವು ಕಾಫಿಯಂತೆ ರುಚಿಸುವುದಿಲ್ಲ. ಕಾಫಿ ಅಥವಾ ಚಹಾಕ್ಕೆ ಹೋಲಿಸಿದರೆ ಇದು ಕಡಿಮೆ ಕೆಫೀನ್ ಅಂಶ ಹೊಂದಿದೆ. ಪಾನೀಯದ ಪೌಷ್ಟಿಕಾಂಶದ ಮೌಲ್ಯದ ಕುರಿತು ಮಾತನಾಡಿದ ಅವರು, ಕಾಫಿ ಎಲೆಯಲ್ಲಿ ಫಿನಾಲಿಕ್ ಆಮ್ಲ ಸಮೃದ್ಧವಾಗಿದೆ. ಸಂಭಾವ್ಯ ಆರೋಗ್ಯ ಪ್ರಯೋಜನಗಳನ್ನು ಹೊಂದಿವೆ.

ಆಸಕ್ತಿ ಉದ್ಯಮಿಗಳಿಗೆ ಉತ್ತಮ ಅವಕಾಶ: ಈ ನೂತನ ತಂತ್ರಜ್ಞಾನದ ಕುರಿತು ಹೆಚ್ಚಿನ ಮಾಹಿತಿಯನ್ನು ಹಂಚಿಕೊಳ್ಳಲು ನಿರಾಕರಿಸಿದ ಅವರು, 2019 ರಲ್ಲಿ ಆರಂಭಗೊಂಡಿರುವ ಈ ಯೋಜನೆ ಎರಡು ವರ್ಷಗಳಲ್ಲಿ ಮುಗಿಯಬೇಕಾಗಿತ್ತು. ಕೋವಿಡ್ ಕಾರಣದಿಂದಾಗಿ ಮತ್ತೆ 6 ತಿಂಗಳು ಮುಂದೆ ಹೋಗಿದೆ. ಈ ತಂತ್ರಜ್ಞಾನವನ್ನು ಕೇಂದ್ರೀಯ ಸಂಶೋಧನಾಲಯದ ಉನ್ನತ ಮಟ್ಟದ ಸಮಿತಿಯ ಮುಂದೆ ಇಟ್ಟು ಆಸಕ್ತ ಉದ್ಯಮಿಗಳು, ವ್ಯಕ್ತಿಗಳಿಗೆ ರಾಯಲ್ಟಿ ಪಡೆದು ನೀಡಲು ಯೋಜಿಸಲಾಗಿದೆ. ಆದರೆ ಈ ಕುರಿತು ಸಮಿತಿಯ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದೆ.

ವಿಜ್ಞಾನಿ ಪುಷ್ಪರ ಹಲವು ಸಾಧನೆ

ವಿಜ್ಞಾನಿ ಪುಷ್ಪಾ ಅವರ ನೂತನ ಸಂಶೋಧನೆ ಕಾಫಿ ಉದ್ಯಮದಲ್ಲಿ ಕ್ರಾಂತಿಯನ್ನೇ ಮಾಡುವ ಸಾಧ್ಯತೆ ಇದೆ. ಪುಷ್ಪಾ ಅವರು ಕಳೆದ ಎರಡು ದಶಕದಿಂದ ಕೇಂದ್ರೀಯ ಆಹಾರ ಸಂಶೋಧನಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಕಾಫಿ ಹಾಗೂ ಸಂಬಾರ ಪದಾರ್ಥಗಳ ಕುರಿತು ಅನೇಕ ಸಂಶೋಧನೆ ಕೂಡ ಮಾಡಿದ್ದಾರೆ.

7 ಪ್ರತಿಶತ ಉತ್ಕರ್ಷಣ ನಿರೋಧಕ ಶಕ್ತಿ

ಒಂದು ಕಾಫಿ ಎಲೆಯು ಹಸಿರು ಚಹಾಕ್ಕಿಂತ ಸುಮಾರು 17 ಪ್ರತಿಶತ ಹೆಚ್ಚು ಉತ್ಕರ್ಷಣ ನಿರೋಧಕಗಳನ್ನು ಹೊಂದಿರುತ್ತದೆ. ಪಾನೀಯವನ್ನು ಸರಳವಾಗಿ ಸೇವಿಸಬೇಕು. ಪಾನೀಯವು ಕ್ಲೋರೊಜೆನಿಕ್ ಆಮ್ಲ ಮತ್ತು ಮ್ಯಾಂಗಿ ಫೆರಿನ್‌ನಂತಹ ಆರೋಗ್ಯ-ಉತ್ತೇಜಿಸುವ ಪಾಲಿಫಿನಾಲಗಳನ್ನು ಹೊಂದಿದೆ. ಇದು ರಕ್ತದಲ್ಲಿನ ಗ್ಲೂಕೋಸ್ ಮಟ್ಟ, ಉರಿಯೂತ ಮತ್ತು ರಕ್ತದೊತ್ತಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ಎಲೆ ನಿರುಪಯುಕ್ತ ಎಂದು ಭಾವಿಸಬಾರದು

ಕಾಫಿ ಎಲೆಗಳು ನಿರುಪಯುಕ್ತ ವಸ್ತು ಎಂದು ಭಾವಿಸಲಾಗುತ್ತದೆ. ಆದರೆ ಕಾಫಿ ಬೆಳೆಯುವ ದೇಶವೇ ಆಗಿರುವ ಇಂಡೋನೇಷ್ಯಾ ಮತ್ತು ಇಥಿಯೋಪಿಯಾದಲ್ಲಿ ಹಿಂದಿನಿಂದಲೇ ಕಾಫಿ ಎಲೆಯಿಂದ ಪಾನೀಯವನ್ನು ತಯಾರಿಸುತ್ತಿದ್ದಾರೆ. ಅಲ್ಲಿ ಇದನ್ನು 'ಕುಟಿ ಟೀ' ಎಂದು ಕರೆಯಲಾಗುತ್ತದೆ. ಪಶ್ಚಿಮ ಸುಮಾತ್ರಾ ಮತ್ತು ಇಂಡೋನೇಷ್ಯಾದಲ್ಲಿ 'ಕಹ್ವಾ ಡಾನ್' ಎಂದು ಕರೆಯಲಾಗುತ್ತದೆ. ಆದರೆ, ಈ ಪ್ರದೇಶದಲ್ಲಿನ ಪಾನೀಯ, ಸಿಎಫ್ ಟಿಆರ್‌ಐ ಅಭಿವೃದ್ಧಿಪಡಿಸಿದ ಪಾನೀಯಕ್ಕಿಂತ ಭಿನ್ನವಾಗಿದೆ. ಈ ಪಾನೀಯವನ್ನು ನೀರಿನಿಂದ ತಯಾರಿಸಬಹುದು, ಕೆಲವು ನಿಮಿಷಗಳ ಕಾಲ ಫಿಲ್ಟರ್ ಮಾಡಿ ಸೇವಿಸಬಹುದು.

15-11-2021 Hd Pg 02

15-11-2021 Pv Pg 3A

ರೈತರು, ಯುವಕರು, ಕೃಷಿ ಆಸಕ್ತರ ದಂಡು: ₹4.25 ಕೋಟಿ ವಹಿವಾಟು

ಕೃಷಿ ಮೇಳಕ್ಕೆ ತೆರೆ: 8 ಲಕ್ಷ ಮಂದಿ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ತಾಂತ್ರಿಕತೆಗಳ ಅನಾವರಣ, ಹೊಸ ತಳಿಗಳು ಮತ್ತು ಆಧುನಿಕ ತಂತ್ರಜ್ಞಾನದ ಉಪಕರಣಗಳ ಪ್ರದರ್ಶನ ಒಳಗೊಂಡಿದ್ದ ಕೃಷಿ ಮೇಳಕ್ಕೆ ಭಾನುವಾರ ತೆರೆ ಬಿದ್ದಿತು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ನಾಲ್ಕು ದಿನಗಳಿಂದ ನಡೆಯುತ್ತಿದ್ದ ಈ ಮೇಳದಲ್ಲಿ ರೈತರು, ಯುವಕರು, ವಿದ್ಯಾರ್ಥಿಗಳು, ವಿವಿಧ ಕ್ಷೇತ್ರಗಳಲ್ಲಿನ ವೃತ್ತಿಪರರು ಪ್ರಾತ್ಯಕ್ಷಿಕೆ ತಾಕುಗಳು, ಮಳಿಗೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದರು. ಮೇಳದ ಕೊನೆಯ ದಿನವೂ ಜನಸಾಗರ ಹರಿದು ಬಂತು. ಭಾನುವಾರ ಮಳೆರಾಯ ಬಿಡುವು ನೀಡಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರು. ಆದರಲ್ಲೂ ರೈತರಿಗಿತಲೂ ನಗರದ ಜನತೆ ಕುಟುಂಬದ ಸದಸ್ಯರೊಂದಿಗೆ ಬಂದಿದ್ದರು. ಮಕ್ಕಳಿಗೆ ಪೋಷಕರು ವಿವಿಧ ಬೆಳೆಗಳ ಬಗ್ಗೆ ಪೋಷಕರು ಪರಿಚಯಿಸಿದರು.

ಕುರಿ, ಕೋಳಿ ಸಾಕಣೆ ಮತ್ತು ಮೀನು ಸಾಕಣೆ, ಪಶುಸಂಗೋಪನೆ, ಹೈನುಗಾರಿಕೆ, ಕೃಷಿ ಯಂತ್ರೋಪಕರಣಗಳ ವಿಭಾಗ, ಸಾವಯವ ಹಾಗೂ ಸಿರಿಧಾನ್ಯ ವಿಭಾಗಗಳಿಗೆ ಹೆಚ್ಚಿನ ಜನರು ಲಗ್ಗೆ ಇಟ್ಟರು.

ನಾಲ್ಕು ದಿನಗಳಲ್ಲಿ ಎಂಟು ಲಕ್ಷ ಮಂದಿ ಕೃಷಿ ಮೇಳಕ್ಕೆ ಭೇಟಿ ನೀಡಿದ್ದಾರೆ ಎಂದು ಕೃಷಿ ವಿಶ್ವವಿದ್ಯಾಲಯ ತಿಳಿಸಿದೆ. ಮೊದಲ ದಿನವಾದ ಗುರುವಾರ 66 ಸಾವಿರ, ಎರಡನೇ ದಿನ 1.70 ಲಕ್ಷ, ಮೂರನೇ ದಿನ 3 ಲಕ್ಷ ಮತ್ತು ನಾಲ್ಕನೇ ದಿನವಾದ ಭಾನುವಾರ 2.64 ಲಕ್ಷ ಮಂದಿ ಮೇಳಕ್ಕೆ ಭೇಟಿ ನೀಡಿದ್ದರು.

ಈ ಬಾರಿ ಸಾಮಾಜಿಕ ಜಾಲತಾಣಗಳಲ್ಲೂ ಕೃಷಿ ಮೇಳವನ್ನು ಹೆಚ್ಚಿನ ಸಂಖ್ಯೆಯಲ್ಲಿ ವೀಕ್ಷಿಸಿದ್ದು ವಿಶೇಷವಾಗಿದೆ. ನಾಲ್ಕು ದಿನಗಳಲ್ಲಿ ಒಟ್ಟು 38.11 ಲಕ್ಷ ಮಂದಿ ಮೇಳ ವೀಕ್ಷಿಸಿದ್ದಾರೆ. ಈ ನಾಲ್ಕು ದಿನಗಳಲ್ಲಿ ₹4.25 ಕೋಟಿ ವಹಿವಾಟು ನಡೆದಿದೆ.

ಕೃಷಿ ವಿಶ್ವವಿದ್ಯಾಲಯದಿಂದ ₹50ಕ್ಕೆ ಮುದ್ದೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಮುದ್ದೆ, ಕಾಳು ಸಾರು, ಅನ್ನ-ಸಾಂಬಾರು, ಮೊಸರನ್ನ, ಉಪ್ಪಿನಕಾಯಿ, ಸಿಹಿ ನೀಡಲಾಯಿತು.

ಕೃಷಿಯತ್ತ ಯುವಕರು!

ಕೃಷಿ ಮೇಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ಭೇಟಿ ನೀಡಿದ್ದು ಗಮನಸೆಳೆಯಿತು. 'ಕೃಷಿಯತ್ತ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಣೆಗೆ ಒಳಗಾಗಿದ್ದಾರೆ. ಹೀಗಾಗಿ, ಸ್ವಯಂ ಆಸಕ್ತಿಯಿಂದ ಬಂದಿದ್ದಾರೆ. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನಗಳ ಅಳವಡಿಕೆ ಸೇರಿದಂತೆ ಕಡಿಮೆ ಖರ್ಚಿನಲ್ಲಿ ಹೆಚ್ಚು ಉತ್ಪನ್ನಗಳನ್ನು ಬೆಳೆಯುವ ಕುರಿತು ಯುವಕರು ಮಾಹಿತಿ ಪಡೆದರು' ಎಂದು ವಿಶ್ವವಿದ್ಯಾಲಯದ ಅಧಿಕಾರಿಗಳು ತಿಳಿಸಿದರು.

'ಆಹಾರ ಉತ್ಪಾದನೆ ಹೆಚ್ಚಿಸಲು ಹಸಿರು ಕ್ರಾಂತಿ ಅಗತ್ಯ'

'ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿ ಸಾಧಿಸಲು ಹಸಿರು ಕ್ರಾಂತಿ ಪ್ರಮುಖ ಪಾತ್ರ ವಹಿಸಿತು' ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

'ಕೃಷಿ ಮೇಳ-2021'ರ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, 'ಹಸಿರು ಕ್ರಾಂತಿಯು ದೇಶವನ್ನು ಆಹಾರದ ಬಿಕ್ಕಟ್ಟಿನಿಂದ ಹೊರತಂದಿದೆ. ಭಾರತೀಯ ಕೃಷಿ ಅಭಿವೃದ್ಧಿ ಹೊಂದಲು ಉತ್ತಮ ಕೃಷಿ ಪದ್ಧತಿ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

'ನ್ಯಾನೊ ತಂತ್ರಜ್ಞಾನ, ಕೃಷಿಯಲ್ಲಿ ಡ್ರೋನ್‌ಗಳ ಬಳಕೆ, ನೀರಾವರಿಯಲ್ಲಿ ಯಾಂತ್ರೀಕರಣ, ಕೃಷಿ ಯಾಂತ್ರೀಕರಣ, ನೈಸರ್ಗಿಕ ಮತ್ತು ಸಾವಯವ ಕೃಷಿ, ಸುಸ್ಥಿರ ಕೃಷಿ ಪದ್ಧತಿಗಳು ಮತ್ತು ರೈತ ಸ್ನೇಹಿ ಹೊಸ ನವೋದ್ಯಮಗಳನ್ನು ಉತ್ತೇಜಿಸುವುದು ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಏಳು ಕೃಷಿ ಸಾಧಕರಿಗೆ ರಾಜ್ಯಮಟ್ಟದ ಕೃಷಿ ಪ್ರಶಸ್ತಿಗಳನ್ನು ರಾಜ್ಯಪಾಲರು ಪ್ರದಾನ ಮಾಡಿದರು. 'ಎಚ್.ಡಿ.ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ'ಗೆ ಆಯ್ಕೆಯಾದ ಹಾಸನ ಜಿಲ್ಲೆಯ ದೊಡ್ಡಮಗ್ಗೆಯ ಎಂ.ಸಿ.ರಂಗಸ್ವಾಮಿ, 'ಡಾ.ಎಂ.ಎಚ್.ಮರೀಗೌಡ ರಾಜ್ಯ ಮಟ್ಟದ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ'ಗೆ ಆಯ್ಕೆಯಾದ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡ ತುಮಕೂರಿನ ಟಿ.ಎಂ.ಅರವಿಂದ, 'ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿ'ಗೆ ಆಯ್ಕೆಯಾದ ಹಾಸನ ಜಿಲ್ಲೆಯ ಯಡೂರು ಗ್ರಾಮದ ವೈ.ಜಿ.ಮಂಜುಳಾ, 'ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ'ಗೆ ಆಯ್ಕೆಯಾದ ದೊಡ್ಡಬಳ್ಳಾಪುರ ತಾಲ್ಲೂಕಿನ ಲಕ್ಷ್ಮಿದೇವಿಪುರದ ಸಿ. ನವಿಕ್ರಮ್, 'ಆರ್.ಡ್ಯಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ'ಗೆ ಆಯ್ಕೆಯಾದ ಕೋಲಾರ ಜಿಲ್ಲೆಯ ಅರಿನಾಗನಹಳ್ಳಿ ಮುನಿರೆಡ್ಡಿ, 'ಆರ್.ಡ್ಯಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ'ಗೆ ಆಯ್ಕೆಯಾದ ದೊಡ್ಡಬಳ್ಳಾಪುರದ ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಎ.ಪಿ.ಮಲ್ಲಿಕಾರ್ಜುನಗೌಡ, 'ಎಂ.ಎಚ್.ಮರೀಗೌಡ ಅತ್ಯುತ್ತಮ ತೋಟಗಾರಿಕಾ ಸಂಶೋಧನಾ ರಾಷ್ಟ್ರೀಯ ದತ್ತಿ ಪ್ರಶಸ್ತಿ'ಗೆ ಆಯ್ಕೆಯಾದ ಬಾಗಲಕೋಟೆ ತೋಟಗಾರಿಕಾ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಎಚ್.ಪಿ.ಮಹೇಶ್ವರಪ್ಪ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.



ನಗರದ ಜಿಕೆವಿಕೆಯಲ್ಲಿ ನಡೆದ ಕೃಷಿಮೇಳದ ಸಮಾರೋಪ ಸಮಾರಂಭದಲ್ಲಿ ಭಾನುವಾರ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕೃಷಿ ಸಾಧಕರಾದ ಅರವಿಂದ್ ಟಿ.ಎಂ., ಸಿ. ನವಿಕ್ರಮ್, ಮಹೇಶ್ವರಪ್ಪ ಎಚ್.ಪಿ. ಡಾ. ಮಲ್ಲಿಕಾರ್ಜುನ್ ಗೌಡ, ರಂಗಸ್ವಾಮಿ ಎಚ್.ಸಿ., ಮುನಿರೆಡ್ಡಿ ಹಾಗೂ ವೈ.ಜಿ.ಮಂಜುಳಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಚಿತ್ರದಲ್ಲಿ ಆರ್ ಶ್ರೀರಾಮ, ಕುಲಪತಿಗಳು ಡಾ.ಎಸ್ ರಾಜೇಂದ್ರ ಪ್ರಸಾದ್, ಡಾ. ಸಿ ರಾಮಂಜನಿ ಗೌಡ ಇದ್ದಾರೆ.

–ಪ್ರಜಾವಾಣಿ ಚಿತ್ರ

ಕೃತಿ ಬಿಡುಗಡೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಹೊರತಂದಿರುವ 'ರೇಷ್ಮೆ ಕೃಷಿ ಆಧುನಿಕ ಬೇಸಾಯ ಪದ್ಧತಿಗಳು' ಕೃತಿಯನ್ನು ರಾಜ್ಯಪಾಲರು ಇದೇ ಸಂದರ್ಭದಲ್ಲಿ ಬಿಡುಗಡೆ ಮಾಡಿದರು.

ರೇಷ್ಮೆ ಕೃಷಿಕರಿಗೆ ಈ ಪುಸ್ತಕ ಉಪಯುಕ್ತವಾಗಿದೆ. ಒಂದು ತಿಂಗಳ ನಂತರ ಪಿಡಿಎಫ್ ರೂಪದ ಈ ಬಹು ಉಪಯೋಗಿ ಪುಸ್ತಕವನ್ನು ಉಚಿತವಾಗಿ ಮೊಬೈಲ್‌ನಲ್ಲಿ ಪಡೆಯಲು ರೈತರು ವಾಟ್ಸ್‌ಆಪ್ ಸಂಖ್ಯೆ: 9535355329 ಅಥವಾ 8553242422ಗೆ ಸಂದೇಶದ ಮೂಲಕ ಮನವಿ ಸಲ್ಲಿಸಿ ಪಡೆದುಕೊಳ್ಳಬಹುದು ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಅಡಕೆ ಸಿಪ್ಪೆ, ಹಸುವಿನ ಸಗಣಿ ಬಳಸಿ ಬತ್ತಿ ತಯಾರಿಕೆ | ಯುವಕನ ಸಾಧನೆ

ಸಗಣಿಯಿಂದ ಸೊಳ್ಳೆಗಳು ಮಾರುದೂರ!

•ಸುಬ್ರಹ್ಮಣ್ಯ ಹೊರಬೈಲು

ಶಿವಮೊಗ್ಗ: ಮಲೆನಾಡಿನಲ್ಲಿ ಯಾತಕ್ಕೂ ಬೇಡವೆಂದು ರಸ್ತೆಗಳ ಪಕ್ಕ ಸುರಿಯುತ್ತಿರುವ ಅಥವಾ ಬೆಂಕಿಗೆ ಹಾಕಿ ಸುಡುತ್ತಿರುವ ಅಡಕೆ ಸಿಪ್ಪೆ ಹಾಗೂ ಮಲೆನಾಡು ಗಿಡ್ಡ ಗೋವಿನ ಸಗಣಿ ಬಳಸಿ ಜನೋಪಯೋಗಿ ವಸ್ತುವೊಂದು ಸಿದ್ಧಗೊಂಡಿದೆ. ತೀರ್ಥಹಳ್ಳಿ ಪಟ್ಟಣಕ್ಕೆ ಸಮೀಪದ ಯುವಕರೋರ್ವರು ಇಂತಹುದೊಂದು ಸಂಶೋಧನೆ ಮಾಡಿದ್ದಾರೆ.

ರಾತ್ರಿಯಾಗುತ್ತಿದ್ದಂತೆ, ಕೆಲವೊಮ್ಮೆ ಹಗಲು ಹೊತ್ತಿನಲ್ಲಿಯೇ ಮನೆಗಳಲ್ಲಿ ಸೊಳ್ಳೆಗಳು ಸಂಗೀತ ಕಛೇರಿ ನಡೆಸುವುದು ಗೊತ್ತಿರುವುದೇ. ಸೊಳ್ಳೆಗಳನ್ನು ಓಡಿಸಲು ಹಲವು ರೀತಿಯ ಸರ್ಕಸ್‌ಗಳನ್ನು ಜನರು ಮಾಡುತ್ತಲೇ ಇರುತ್ತಾರೆ. ಇದಕ್ಕೆ ಪರಿಹಾರವಾಗಿ ನೂತನ ಸಾಮಗ್ರಿ ಮಾರುಕಟ್ಟೆಗೆ ಬಂದಿದೆ. ತೀರ್ಥಹಳ್ಳಿ ಸಮೀಪದ ಗುಡ್ಡೆಕೊಪ್ಪ ಗ್ರಾಮದ ಸುಧಾಕರ್ ಇದರ ಸಂಶೋಧಕರು. ೨



ಏನೇನಿದೆ ಈ ಉತ್ಪನ್ನದಲ್ಲಿ?

ಪ್ರಮುಖವಾಗಿ ಚಾಲಿ ಅಡಕೆ ಸಿಪ್ಪೆಯನ್ನು ಇದಕ್ಕೆ ಬಳಸಲಾಗಿದೆ. ಇದು ಸೊಳ್ಳೆ ಬತ್ತಿ ಉರಿಯಲು ಸಹಾಯ ಮಾಡುತ್ತದೆ. ಇದರೊಂದಿಗೆ ಮಲೆನಾಡು ಗಿಡ್ಡ ಹಸುವಿನ ಸಗಣಿ ಬಳಕೆಯಾಗಿದೆ. ಈ ಎರಡರ ಮಿಶ್ರಣಕ್ಕೆ ಮುಷ್ಟಿ ಭದ್ರ, ತುಪ್ಪ, ಬೇವು, ತುಳಸಿ, ಗುಗ್ಗಳ ಹಾಗೂ ಜರಾಮಾಸಿ ಎಂಬ ಔಷಧೀಯ ಸಸ್ಯವನ್ನು ಬಳಸಲಾಗಿದೆ. ಒಂದು ಪ್ಯಾಕೇಟ್‌ನಲ್ಲಿ 10 ಸೊಳ್ಳೆ ಬತ್ತಿಗಳಿರುತ್ತವೆ. ಇದಕ್ಕೆ 30 ರೂ.ಬೆಲೆ ನಿಗದಿ ಮಾಡಲಾಗಿದೆ. ಮಾಹಿತಿಗೆ ಸುಧಾಕರ-ಫೋ.8123459190ಗೆ ಸಂಪರ್ಕಿಸಬಹುದು.

15-11-2021 Pv Pg 3A

ಜಿಕೆವಿಕೆ ಕೃಷಿ ಮೇಳದಲ್ಲಿ ಎತ್ತಿನ ಬಂಡಿ ಪ್ರದರ್ಶನ

ಇಂಧನರಹಿತ ಉಳುಮೆಗೆ 'ಸುಧಾರಿತ ಬಂಡಿ'

ಮನೋಹರ್ ಎಂ.

ಬೆಂಗಳೂರು: ಡೀಸೆಲ್ ದರ ಏರಿಕೆಯಿಂದ ಕಂಗೆಟ್ಟಿರುವ ರೈತರಿಗೆ ಇಂಧನದ ಬಳಕೆಯಿಲ್ಲದೆ ಜಮೀನು ಉಳುಮೆ ಮಾಡಲು ಸುಧಾರಿತ ಬಂಡಿ ಸಿದ್ಧಗೊಂಡಿದೆ. ಎತ್ತುಗಳನ್ನು ಬಳಸುವ ಈ ಬಂಡಿಯನ್ನು ತಮಿಳುನಾಡು ಮೂಲದ ಅಗ್ನಿ ಕಾರ್ಟ್ ಎಂಬ ಕಂಪನಿ ಅಭಿವೃದ್ಧಿಪಡಿಸಿದೆ.


ಈ ಸುಧಾರಿತ ಉಳುಮೆ ಬಂಡಿ ಬೆಂಗಳೂರಿನ ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ 'ಕೃಷಿ ಮೇಳ'ದಲ್ಲಿ ರೈತರ ಹುಬ್ಬೇರುವಂತೆ ಮಾಡಿದೆ. 'ಮರಳಿ ನೇಗಿಲಿನ ಕಡೆಗೆ' ಎಂಬ ಆಶಯದೊಂದಿಗೆ ಅಭಿವೃದ್ಧಿಗೊಂಡಿರುವ ಈ ಉಳುಮೆ ಬಂಡಿಯನ್ನು ಕಂಡ ರೈತರು,'ಟ್ರ್ಯಾಕ್ಟರ್ ಬದಲಿಗೆ ಈ ಬಂಡಿ ಖರೀದಿಸಿದರೆ, ಕಿಸೆಯಲ್ಲಿ ಕಾಸು ಉಳಿಸಬಹುದು' ಎಂದು ಸಂತಸ ವ್ಯಕ್ತಪಡಿಸಿದರು.

'ಹಿಂದೆಲ್ಲ ಎತ್ತುಗಳನ್ನು ಕಟ್ಟಿ ನೇಗಿಲಿನಿಂದ ಜಮೀನಿನ ಉಳುಮೆ ನಡೆಯುತ್ತಿತ್ತು. ಎತ್ತುಗಳ ಸಂಖ್ಯೆ ಕಡಿಮೆಯಾದಂತೆ ನೇಗಿಲ ಜಾಗಕ್ಕೆ ಟ್ರ್ಯಾಕ್ಟರ್ ಬಂತು. ಈಗ ಬಹುತೇಕರು ಜಮೀನು ಉಳುಮೆ ಮಾಡಲು ಟ್ರ್ಯಾಕ್ಟರ್ ಅನ್ನೇ ಅವಲಂಬಿಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಡೀಸೆಲ್ ದರ ಗಗನಕ್ಕೇರಿರುವುದರಿಂದ ರೈತರಿಗೆ ಉಳುಮೆಯೂ ದುಬಾರಿಯಾಗಿದೆ. ಈ ಸಮಸ್ಯೆಗೆ ಪರ್ಯಾಯವಾಗಿ ಹಾಗೂ ಪರಿಹಾರವಾಗಿ ಈ ಇಂಧನರಹಿತ ಉಳುಮೆ ಬಂಡಿ ಅಭಿವೃದ್ಧಿಪಡಿಸಿದ್ದೇವೆ' ಎನ್ನುತ್ತಾರೆ ಅಗ್ನಿ ಕಾರ್ಟ್ ಸಂಸ್ಥೆಯ ಸ್ಥಾಪಕ ಎ.ಪಿ.ಸಸಿಕುಮಾರ್.

'ಇದು, ಹಳೆಯ ನೇಗಿಲನ್ನೇ ಹೋಲುತ್ತದೆ. ಆದರೆ, ಮರದ ಬದಲಿಗೆ ಕಬ್ಬಿಣದಲ್ಲಿ ಇದನ್ನು ತಯಾರಿಸಲಾಗಿದೆ. ರೈತರು ಹಗಲ ಮೇಲೆ ನೇಗಿಲನ್ನು ಹೊತ್ತು ತೋಟಕ್ಕೆ ಹೋಗುತ್ತಿದ್ದರು. ಇದರಲ್ಲಿ ರೈತರು ಸಂಚರಿಸಲು ಅನುಕೂಲವಾಗುವಂತೆ ಎರಡು ಚಕ್ರಗಳನ್ನು ಅಳವಡಿಸಿದ್ದೇವೆ. ಇದರ ತೂಕವೂ ಕಡಿಮೆ ಇದೆ. ಎತ್ತುಗಳ ಸಹಾಯದಲ್ಲಿ ಒಂದು ಎಕರೆ ಪ್ರದೇಶವನ್ನು 1 ಗಂಟೆ 30 ನಿಮಿಷದಲ್ಲಿ ಉಳುವ ಸಾಮರ್ಥ್ಯವನ್ನು ಈ ಬಂಡಿ ಹೊಂದಿದೆ' ಎಂದು ವಿವರಿಸಿದರು.



'ಸುಧಾರಿತ ಉಳುಮೆ ಬಂಡಿ'ಯಲ್ಲಿ ಸವಾರಿ ಮಾಡಿದ ಹೊಸಕೋಟೆಯ ರೈತ ಕಾಂತಕುಮಾರ್ –ಪ್ರಜಾವಾಣಿ ಚಿತ್ರ



ಡೀಸೆಲ್ ದರ ಹೆಚ್ಚಳದಿಂದ ಟ್ರ್ಯಾಕ್ಟರ್ ನಿರ್ವಹಣೆ ಹೊರೆಯಾಗುತ್ತಿದೆ. ಈ ಬಂಡಿ ಇಷ್ಟವಾಗಿದೆ. ಸದ್ಯದಲ್ಲೇ ಖರೀದಿಸುತ್ತೇನೆ
ಧನಂಜಯ, ಮಂಡ್ಯ ಜಿಲ್ಲೆಯ ರೈತ

'ದರ ₹ 36 ಸಾವಿರ'

'ಸುಧಾರಿತ ಉಳುಮೆ ಬಂಡಿಗೆ ₹36 ಸಾವಿರ ದರ ನಿಗದಿ ಮಾಡಲಾಗಿದೆ. ತಮಿಳುನಾಡು ಹಾಗೂ ಕರ್ನಾಟಕದಲ್ಲಿ ಈವರೆಗೆ 100ಕ್ಕೂ ಹೆಚ್ಚು ಬಂಡಿಗಳನ್ನು ರೈತರು ಖರೀದಿಸಿ ಬಳಸುತ್ತಿದ್ದಾರೆ. ಬೆಂಗಳೂರಿನಲ್ಲೂ ನಮ್ಮ ವಿತರಣಾ ಶಾಖೆಯಿದ್ದು, ಆಸಕ್ತರು 9900511170 ಸಂಖ್ಯೆಯನ್ನು ಸಂಪರ್ಕಿಸಬಹುದು' ಎಂದು ಸಸಿಕುಮಾರ್ ತಿಳಿಸಿದರು.

'ಇದನ್ನು ಜಮೀನಿನಲ್ಲಿ ಉಳುವ ನೇಗಿಲಿನಂತೆ ಹಾಗೂ ರಸ್ತೆಯ ಮೇಲೆ ಚಲಿಸುವ ಬಂಡಿಯಂತೆ ಎರಡೂ ರೀತಿಯಲ್ಲಿ ಬಳಸಲು ಅನುವಾಗುವಂತೆ ಅಭಿವೃದ್ಧಿಪಡಿಸಿದ್ದೇವೆ. ಹಿಂದೆ ಬಂಡಿಯಲ್ಲಿ ನೇಗಿಲನ್ನು ತರಲಾಗುತ್ತಿತ್ತು. ಈಗ ಬಂಡಿಯೇ ತೋಟದಲ್ಲಿ ನೇಗಿಲಾಗಿ ಉಳುಮೆ ಮಾಡುತ್ತದೆ. ಟ್ರ್ಯಾಕ್ಟರ್‌ನಲ್ಲಿ ಬಳಸುವ ಉಳುಮೆಯ ಎಲ್ಲ ರೀತಿಯ ಸಾಧನಗಳನ್ನೂ ಈ ಬಂಡಿಗೆ ಅಳವಡಿಸಿ ಉಳುಮೆ ಮಾಡಬಹುದು. ಅದಕ್ಕಾಗಿಯೇ ಪ್ರತ್ಯೇಕ ಉಳುಮೆ ಸಾಧನಗಳೂ ನಮ್ಮಲ್ಲಿ ಲಭ್ಯ' ಎಂದು ಮಾಹಿತಿ ನೀಡಿದರು.

ರೈತರಿಗೆ ಆಸನ: 'ರೈತರು ಕುಳಿತುಕೊಳ್ಳಲು ಆಸನ ಅಳವಡಿಸಿರುವುದು ಸುಧಾರಿತ ಉಳುಮೆ ಬಂಡಿಯ ಮತ್ತೊಂದು ವಿಶೇಷ. ರೈತನಿಗೆ ಆಯಾಸವಾಗುವುದನ್ನು ಇದು ತಪ್ಪಿಸಲಿದೆ. ಉಳುವಾಗ ರೈತರು ಕೂರುವ ಭಾರದಿಂದಾಗಿ ನೇಗಿಲು ಭೂಮಿಯ ಆಳಕ್ಕೆ ಇಳಿಯುತ್ತದೆ. ಆಸನವು ಈ ಎರಡು ಉದ್ದೇಶಗಳನ್ನು ಈಡೇರಿಸುತ್ತದೆ' ಎಂದು ಸಸಿಕುಮಾರ್ ವಿವರಿಸಿದರು.

15-11-2021 Dec Hrd Pg 02

Krishi Mela concludes

▶ About 8 lakh people visited Krishi Mela, the annual exhibition of agricultural and agro-industry products and technology, which concluded on Sunday. While the rain prevented many from travelling to Gandhi Krishi Vigyan Kendra to take part in the events over the last four days, officials said 38.11 people visited the mela online.

ಗಮನಸೆಳೆದ ಪಾಲಿಹೌಸ್‌ನ ತೋಟಗಾರಿಕೆ ಬೆಳೆಗಳ ಪ್ರಾತ್ಯಕ್ಷಿಕೆ

ನಿಖರ ಕೃಷಿ–ಖಚಿತ ಆದಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಭ್ಯ ಇರುವ ನೀರಿನ ಸಮರ್ಪಕ ಬಳಕೆ ಮತ್ತು ಕೀಟಗಳ ಹಾವಳಿ ನಿಯಂತ್ರಿಸುವ ಪಾಲಿಹೌಸ್ ಪದ್ಧತಿ ಅಡಿಯಲ್ಲಿ ಬೆಳೆದ ತೋಟಗಾರಿಕೆ ಬೆಳೆಗಳು ಕೃಷಿ ಮೇಳದಲ್ಲಿ ಗಮನಸೆಳೆದವು.

ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿನ ತಾಕುಗಳಲ್ಲಿ ಪಾಲಿಹೌಸ್‌ನಲ್ಲಿ ಬೆಳೆದ ಬಾಳೆ, ಸೌತೆಕಾಯಿ, ದೊಣ್ಣೆ ಮೆಣಸಿನಕಾಯಿ, ಟೊಮೆಟೊ, ಪಪ್ಪಾಯ, ಬದನೆಗಳನ್ನು ಬೆಳೆಸಲಾಗಿದೆ. ಬೆಳೆಗೆ ಅಗತ್ಯವಿರುವಷ್ಟೇ ನೀರು ಮತ್ತು ಗೊಬ್ಬರವನ್ನು ಪೂರೈಸುವುದು ಈ ಪದ್ಧತಿಯ ಪ್ರಮುಖ ಅಂಶ.

ಹಸಿರು ಮನೆಯಲ್ಲಿ ನಿಖರ ಬೇಸಾಯ ಪದ್ಧತಿ ಅಳವಡಿಸಿ ಬೆಳೆದ 300 ಬಾಳೆ ಗಿಡಗಳಿಂದ 2500 ಕೆ.ಜಿ. (60 ಗೊನೆ) ಬಾಳೆ ದೊರೆತಿದ್ದು, ₹47 ಸಾವಿರ ಆದಾಯ ಲಭ್ಯವಾಗಿದೆ.



ಪಾಲಿಹೌಸ್‌ನಲ್ಲಿ ಬೆಳೆದ ಬಾಳೆ ವೀಕ್ಷಿಸುತ್ತಿರುವ ಯುವಕರು

ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ.

ಜತೆಗೆ, ಈ ಬಾಳೆಗಳ ನಡುವೆ ಅಂತರ ಬೆಳೆಯಾಗಿ ಬೆಳೆದ ತರಕಾರಿಗಳು, ಹೂಕೋಸು, ಗಡ್ಡ ಕೋಸು, ಟೊಮೆಟೊನಿಂದ ₹28 ಸಾವಿರ ದೊರೆತಿದೆ. ಇದರಿಂದ ಒಟ್ಟು ₹75 ಸಾವಿರ ಆದಾಯ ದೊರೆತಿದೆ.

ಇದೇ ರೀತಿಯಲ್ಲಿ 132 ಪಪ್ಪಾಯಿ ಗಿಡಗಳಿಂದ 4457 ಕೆ.ಜಿ. ಫಸಲು ದೊರೆತಿದ್ದು, ₹1.33 ಲಕ್ಷ ಆದಾಯ ದೊರೆತಿದೆ. ಅಂತರ ಬೆಳೆಗಳಿಂದ ₹20ಸಾವಿರ ಆದಾಯ ಲಭ್ಯವಾಗಿದೆ. ಹೀಗಾಗಿ ಒಟ್ಟು ₹1.53 ಲಕ್ಷ ಆದಾಯ ಬಂದಿದೆ.

'ನಿಖರ ಕೃಷಿ ಪದ್ಧತಿಯು ಹನಿ ನೀರಾವರಿ ಸೇರಿದಂತೆ ಹಲವಾರು ತಾಂತ್ರಿಕ ಅಂಶಗಳನ್ನು ಒಳಗೊಂಡಿದೆ. ಪಾಲಿಹೌಸ್ ಈ ಪದ್ಧತಿಯ ಭಾಗ. ಇದು ರಕ್ಷಣಾತ್ಮಕ ಬೇಸಾಯ. ಕೀಟಗಳಿಗೆ ಆಸ್ಪದ ದೊರೆಯುವುದಿಲ್ಲ. ಬೇವಿನ ಎಣ್ಣೆ ಅಥವಾ ಸಾವಯವ ಗೊಬ್ಬರಗಳನ್ನು ಬಳಸಬಹುದು. ಇದು ಮುಖ್ಯವಾಗಿ ರೋಗಮುಕ್ತವಾಗಿರುತ್ತದೆ. ಎಲ್ಲ ರೀತಿ ಬೆಳೆಗಳನ್ನು ಪಾಲಿಹೌಸ್‌ನಲ್ಲಿ ಬೆಳೆಸಬಹುದು' ಎಂದು ಜಿಕೆವಿಕೆಯ ಸಹಾಯಕ ಪ್ರಾಧ್ಯಾಪಕ ಮತ್ತು ತೋಟಗಾರಿಕೆ ವಿಜ್ಞಾನಿ ಡಾ. ಬಿ.ಜಿ. ಹನುಮಂತರಾಯ ವಿವರಿಸಿದ್ದಾರೆ.

15-11-2021 Pv Pg 3A

ಕೇಂದ್ರ, ಉತ್ತರಾಖಂಡ ಸರ್ಕಾರಗಳ ಸಹಯೋಗದಲ್ಲಿ ಸ್ಥಾಪನೆ

ಮೊದಲ ಹುಲ್ಲು ಸಂರಕ್ಷಣಾಲಯ

ಡೆಹ್ರಾಡೂನ್: ನೈಸರ್ಗಿಕವಾಗಿ ಬೆಳೆಯುವ ಹುಲ್ಲು ಜಾತಿಯ ಸಸ್ಯಗಳನ್ನು ಹಾಗೂ ಅವುಗಳ ತಳಿಗಳನ್ನು ಸಂರಕ್ಷಿಸುವ ಉದ್ದೇಶದಿಂದ, ದೇಶದಲ್ಲೇ ಮೊದಲ ಬಾರಿಗೆ 'ಹುಲ್ಲು ಸಂರಕ್ಷಣಾ ಕೇಂದ್ರ'ವೊಂದನ್ನು ಉತ್ತರಾಖಂಡದ ಅಲ್ಮೋರಾ ಜಿಲ್ಲೆಯ ರಾಣಿಖೇತ್‌ನಲ್ಲಿ ಸ್ಥಾಪಿಸಲಾಗಿದೆ.



ಕೇಂದ್ರ ಸರ್ಕಾರದ 'ಕಾಂಪೆನ್ಸೇಟರಿ ಅಫಾರೆಸ್ಟೇಷನ್ ಫಂಡ್ ಮ್ಯಾನೇಜ್‌ಮೆಂಟ್ ಆ್ಯಂಡ್ ಪ್ಲಾನಿಂಗ್ ಅಥಾರಿಟಿ' ಅನುದಾನದಡಿ, ಉತ್ತರಾಖಂಡದ ಅರಣ್ಯ ಇಲಾಖೆ ಮತಿಯಿಂದ ಈ ಸಂರಕ್ಷಣಾ ಕೇಂದ್ರವನ್ನು 3 ವರ್ಷಗಳ ಸತತ ಪರಿಶ್ರಮದಿಂದ ಸ್ಥಾಪಿಸಲಾಗಿದೆ.

ಎರಡು ಎಕರೆಗಳ ವಿಸ್ತೀರ್ಣದಲ್ಲಿ ನಿರ್ಮಿಸಲಾಗಿರುವ ಈ ಕೇಂದ್ರದಲ್ಲಿ ವೈಜ್ಞಾನಿಕವಾಗಿ, ವೈದ್ಯಕೀಯವಾಗಿ, ಸಾಂಸ್ಕೃತಿಕವಾಗಿ ಹಾಗೂ ಪರಿಸರ ದೃಷ್ಟಿಯಿಂದ ಮಹತ್ವವೆನಿಸಿರುವ ಸುಮಾರು 90 ವಿವಿಧ ಹುಲ್ಲು ತಳಿಗಳನ್ನು ಸಂರಕ್ಷಿಸಲಾಗಿದೆ. ಇದರ ಜೊತೆಗೆ ಅವುಗಳ ಅಭಿವೃದ್ಧಿಗಾಗಿ ಸಂಶೋಧನೆಗಳನ್ನು ಕೈಗೊಳ್ಳಲೂ ಇಲ್ಲಿ ಅವಕಾಶವಿದೆ. ಅರಣ್ಯ ಪ್ರದೇಶಗಳಿಗೆ ಹೋಲಿಸಿದರೆ, ಹುಲ್ಲುಗಾವಲು ಅಥವಾ ಹುಲ್ಲು ಬೆಳೆಯುವ ಜಾಗಗಳು ಇಂಗಾಲವನ್ನು ಹೆಚ್ಚಾಗಿ ಹೀರಿಕೊಳ್ಳುತ್ತವೆ. ಇವು ಹೂಬಿಡುವ ಗಿಡಗಳಿಗೆ ಆಸರೆಯಾಗಿವೆ.

15-11-2021 Uv Pg 08

ರಾಜ್ಯಮಟ್ಟದ ಕೃಷಿ ಪ್ರಶಸ್ತಿ ವಿಜೇತರಿಗೆ ರಾಜ್ಯಪಾಲ ಗೆಹಲೋತ್‌ರಿಂದ ಪ್ರಶಸ್ತಿ ಪ್ರದಾನ

ನಾಲ್ಕು ದಿನಗಳ ಕೃಷಿ ಮೇಳಕ್ಕೆ ಅದ್ಧೂರಿ ತೆರೆ

ಬೆಂಗಳೂರು: ನಾಲ್ಕು ದಿನಗಳ ಕಾಲ ಗಾಂಧಿ ಕೃಷಿ ವಿಜ್ಞಾನ ಕೇಂದ್ರ(ಜಕ್ಕೂರ್) ನಡೆದ ಕೃಷಿ ಮೇಳ- 2021ಕ್ಕೆ ಮಾನಸಾದರ ಅದ್ಧೂರಿ ತೆರೆ ಬಿತ್ತು.

ಸಮಾರೋಪದಲ್ಲಿ ರಾಜ್ಯಮಟ್ಟದ ಕೃಷಿ ಪ್ರಶಸ್ತಿ ವಿಜೇತರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಪ್ರಶಸ್ತಿ ಪ್ರದಾನ ಮಾಡಿ ಕೃಷಿ ಮಾತನಾಡಿದರು. ಇನ್ನು ಭಾನುವಾರವಾಗಿದ್ದರಿಂದ ಮತ್ತು ಮಳೆ ಸಾಧುವೆ ನೀಡಿದ್ದರಿಂದ ಲಕ್ಷಾಂತರ ಜನರು ಕೃಷಿ ಮೇಳದ ಆಸುಪಾಸ ಪಡೆದರು.

ಕೃಷಿ ಉದ್ಯಕರಣಗಳು, ನೂತನ ತಳಗಳು, ಆಧುನಿಕ ತಂತ್ರಜ್ಞಾನ, ಪಶ್ಚಿಮ-ಬಾಲ, ಹಾಗೂ ಕೃಷಿ ಸೇರಿದಂತೆ ನೂತನ ಕೃಷಿ ಮಾದರಿಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಪ್ರತಿ ಮಳಿಗೆಗಳ ಮುಂಚೆ ಜನರು ಕಿಕ್ಕಿರಿದು ತುಂಬಿದ್ದರು.

ಅಷ್ಟೇ ರೈತಿಕ ಕೃಷಿ ವಿಶ್ವವಿದ್ಯಾಲಯ ಅವರಗಾವಿಲ್ಲಿ ಬೆಳೆದಿರುವ ರಾಗಿ, ಬತ್ತ, ಜೋಳ, ನವಣೆ, ಸಾಮೆ, ಆರ್ಕ, ಬರಗು, ಸುಗಂಧ ದ್ರವ್ಯಗಳ ಗಿಡಗಳು, ದಿವಿದೀಯ ಸಸ್ಯಗಳು, ಪೈಡೋಪೋನಿಕ್ಸ್ ತಂತ್ರಜ್ಞಾನ, ಇಕ್ಕೆಲ್ ಕೃಷಿ ಪದ್ಧತಿ, ಜೀನು ಕೃಷಿ ಸೇರಿದಂತೆ ಎಲ್ಲೆಯೂ ಇನ ಸಾಗರದ ತುಂಬಿತ್ತು ಎಳೆ ಬಿಸಿಲು ಮತ್ತು ತುಸು ತಂಗಾಳಿ ಬೀಸುತ್ತಿದ್ದಂತೆ ಜನರು ಆರಾಮಾಗಿ ಮೇಳವನ್ನು ಸುಖಾ ಎಂಜಾಯ್ ಮಾಡಿದರು.

ಜಾತ್ರೆಯಂತಾದ ಮೇಳ: ಮೂರಲ ಮೂರು ದಿನ ಜಿಟಿ ಜಿಟಿ ಮಳೆಯಲ್ಲಿ ನಡೆದ ಮೇಳ, ಕೊನೆಯ ದಿನವಾದ ಭಾನುವಾರ ಮಾತ್ರ ಜಾತ್ರೆಯ ಳೆ ಬಂದಿತ್ತು. ಮೇಳದ ಪ್ರತಿ ಬೀದಿಗಳಲ್ಲಿ ಕಡಲೆಪುರಿ, ಆಟಿಕೋಲು, ವಸ್ತ್ರಗಳು, ಬ್ಯಾಗಗಳು, ಮನೆಬಳಕೆ ವಸ್ತುಗಳು, ಬಲೂನುಗಳು, ಭಜ್ಜಿ-ಬೊಗಂಡ, ಸ್ಟಿಟ್ ಕಾರ್ನ್ ಸೇರಿದಂತೆ ಹತ್ತಾರು ಬಗೆಯ ತಿಂಡಿ-ತಿನಿಸುಗಳ ಮಾರಾಟವಾಗುತ್ತಿತ್ತು. ನಗರದ ಜನತೆಗೆ ಒಂದು ರೀತಿಯಲ್ಲಿ ಜಾತ್ರೆಯ ಅನುಭವ ಪಡೆದರು.

ರಾಜ್ಯಪಾಲರ ಭೇಟಿ- ಬೆಳಿಗ್ಗೆ ವೀಕ್ಷಣೆ ನಿಷೇಧ: ಮಧ್ಯಾಹ್ನ 2.30ಕ್ಕೆ ರಾಜ್ಯಪಾಲರ ಕಾರ್ಯಕ್ರಮದ ಸಮಯ ನಿಗದಿಯಾಗಿತ್ತು ಭೇಟಿ ವೇಳೆ ಈ ಬಾರಿ ಬದುಗಡೆ ಮಾಡಿರುವ ಹತ್ತು ನೂತನ ತಳಗಳ ಬೆಳೆಯನ್ನು ಕೂಡ ರಾಜ್ಯಪಾಲರು ವೀಕ್ಷಣೆ ಮಾಡಲಿದ್ದಾರೆ ಎಂದು ಹೇಳಲಾಗಿತ್ತು. ಶಿಷ್ಟಾಚಾರ ಪಾಲನೆ ಮಾಡುವ ಉದ್ದೇಶದಿಂದ ಭದ್ರತಾ ಸ್ಟ್ಯಾಂದಿ ಮಧ್ಯಾಹ್ನ ಒಂದು ಗಂಟೆಯಿಂದಲೇ ತೋಟದ ಬೆಳೆಗಳ ವೀಕ್ಷಣೆಗೆ ಪ್ರವೇಶ ನಿಷೇಧಿಸಿದರು. ಸುಮಾರು ಎರಡು ಗಂಟೆಗೆ ಸಮಯ ಸಾರ್ವಜನಿಕರ ವೀಕ್ಷಣೆಗೆ ನಿಷೇಧ ಹೇರಿದ್ದರಿಂದ ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದರು.



ಸಮಾರೋಪದಲ್ಲಿ ರಾಜ್ಯಮಟ್ಟದ ಕೃಷಿ ಪ್ರಶಸ್ತಿ ವಿಜೇತರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಪ್ರಶಸ್ತಿ ಪ್ರದಾನ ಮಾಡಿದರು.

8 ಲಕ್ಷ ಜನ, ವರ್ಚುಯಲ್‌ನಲ್ಲಿ 38 ಲಕ್ಷ ಜನ ಭೇಟಿ

ಮೇಳಕ್ಕೆ ಭಾನುವಾರ ಕೂಡ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. 2.64 ಲಕ್ಷ ಜನರು ಭೌತಿಕವಾಗಿ ಮತ್ತು 18.29 ಲಕ್ಷ ಜನರು ವರ್ಚುಯಲ್ ವೇದಿಕೆಯಲ್ಲಿ ಮೇಳವನ್ನು ವೀಕ್ಷಣೆ ಮಾಡಿದ್ದಾರೆ. ಒಟ್ಟಾರೆ ನಾಲ್ಕು ದಿನಗಳಲ್ಲಿ ಭೌತಿಕವಾಗಿ 8 ಲಕ್ಷ ಹಾಗೂ ವರ್ಚುಯಲ್‌ನಲ್ಲಿ 38.11 ಲಕ್ಷ ಮಂದಿ ಮೇಳವನ್ನು ವೀಕ್ಷಣೆ ಮಾಡಿದ್ದಾರೆ. ಈ ಮೂಲಕ ಕೃಷಿ ವಿಶ್ವವಿದ್ಯಾಲಯದ ನಿರೀಕ್ಷೆಗೂ ಮೀರಿ ದೊಡ್ಡ ಸಂಖ್ಯೆಯಲ್ಲಿ ಜನರು ಮೇಳವನ್ನು ವೀಕ್ಷಣೆ ಮಾಡಿದ್ದಾರೆ. ಮೊದಲನೇ ದಿನ ಭೌತಿಕವಾಗಿ 60 ಸಾವಿರ ಮತ್ತು ಆನ್‌ಲೈನ್‌ನಲ್ಲಿ 1.55 ಸಾವಿರ, 2ನೇ ದಿನ ಮೇಳಕ್ಕೆ 1.76 ಲಕ್ಷ ಭೇಟಿ, ಆನ್‌ಲೈನ್‌ನಲ್ಲಿ 5.2 ಲಕ್ಷ, 3ನೇ ದಿನ 3 ಲಕ್ಷ ಮತ್ತು ಆನ್‌ಲೈನ್‌ನಲ್ಲಿ 12.96 ಲಕ್ಷ ಜನ ಭೇಟಿ ನೀಡಿದ್ದರು. ಕಳೆದ ವರ್ಷ ವರ್ಚುವಲ್ ವೇದಿಕೆಯಲ್ಲಿ ಮೇಳ ನಡೆಸಲಾಗಿತ್ತು. ಆನ್‌ಲೈನ್‌ನಲ್ಲಿ ಕೇವಲ 1.25 ಲಕ್ಷ ಮಂದಿಯಷ್ಟೇ ಭಾಗವಹಿಸಿದ್ದರು. ಇನ್ನು 2019ರಲ್ಲಿ ನಡೆದಿದ್ದ ಕೃಷಿ ಮೇಳದಲ್ಲಿ 14 ಲಕ್ಷ ಭೇಟಿ ನೀಡಿದ್ದರು.

ಬ್ಯಾಟರಿ ಚಾಲಿತ ವೀಡರ್

ಸಣ್ಣ ರೈತರಿಗಾಗಿ ಸೂರ್ಯ ನಿರ್ಧರ್ ಆಗ್ರಿಟೆಕ್ ಸಂಸ್ಥೆಯು ಬ್ಯಾಟರಿ ಚಾಲಿತ ವೀಡರ್ ಅನ್ನು ಸಂಶೋಧಿಸಿದೆ. ಮುಂದಿನ ವರ್ಷದ ಆರಂಭದಲ್ಲಿ ಮಾರುಟ್ಟೆಗೆ ಬರಲಿದೆಯಲಿದೆ. ಈ ವೀಡರ್‌ನಲ್ಲಿ ಮೆಕ್ಕೆಜೋಳ, ಕೇಂಗಾ, ತರಕಾರಿ ಬೆಳೆಗಳಾದ ಟೆಮೆಟೋ, ಮೇಣಸಿನಕಾಯಿ, ಹುರುಳಿಕಾಯಿ, ತೊಗರಿ, ಹೂದೋಟ ಸೇರಿದಂತೆ ಇನ್ನಿತರ ಬೆಳೆಗಳ ತೋಟಗಳಲ್ಲಿ ಬಹಳ ಸುಲಭವಾಗಿ ಕಳೆ ತೆಗೆಯಬಹುದಾಗಿದೆ. ಇದರ ಜೊತೆಗೆ ಬಿತ್ತನೆ ಮಾಡಲು ಕೂಡ ಬಳಸಬಹುದು. ಕೇಂಗಾ ಬಿತ್ತನೆ, ಕಾಳುಗಳ ಬಿತ್ತನೆ ಮಾಡಲು ಸಹ ಬಹಳಸಬಹುದಾಗಿದೆ. ಎರಡು ಆಳದವರೆಗೆ ಉಳುಮೆ ಮಾಡಲಿದೆ. ವೀಡರ್ ಅನ್ನು ಸೋಲಾರ್ ಮತ್ತು ವಿದ್ಯುತ್ ಎರಡರಲ್ಲಿಯೂ ಚಾರ್ಜ್ ಮಾಡಿಕೊಳ್ಳಬಹುದು. ರೈತರು ತಮಗೆ ಅನುಕೂಲವಾಗುವುದರಲ್ಲಿ ಮಾಡಿಕೊಳ್ಳಬಹುದು. ಎರಡು ಗಂಟೆ ಚಾರ್ಜ್ ಮಾಡಿದರೆ, ಕನಿಷ್ಠ 3ರಿಂದ 4 ಗಂಟೆ ವರೆಗೆ ಕೆಲಸ ಮಾಡಲಿದೆ. ಗಟ್ಟಿ ಮಣ್ಣು ಅಥವಾ ಮೃದು ಮಣ್ಣಿನ ಆಧಾರದಲ್ಲಿ ಚಾರ್ಜ್ ಕಡಿಮೆಯಾಗಲಿದೆ. ನಮ್ಮ ಇನ್ನೂ ಬೆಲೆ ನಿಗದಿ ಮಾಡಿಲ್ಲ, ಆದರೆ, ಅಂದಾಜು 35 ಸಾವಿರ ಬೆಚ್ಚಿನಿಗದಿಯಾಗಬಹುದು. ಸಬ್ಸಿಡಿ ನೀಡುವ ಕುರುತು ಸರ್ಕಾರದ ಜೊತೆ ಮಾತುಕತೆ ನಡೆಸಲಾಗುತ್ತಿದೆ. ಯಾವುದೇ ವಿದೇಶಿ ಉಪಕರಣಗಳನ್ನು ಬಳಸದೆ ದೇಶೀಯ ಉಪಕರಣಗಳನ್ನು ಬಳಸಿ ಯಂತ್ರ ತಯಾರಿಸಲಾಗಿದೆ ಎನ್ನುತ್ತಾರೆ ಸಂಸ್ಥೆಯ ಮಾಲೀಕ ವಿಕಾಸ್.



ಮನೆಗಾಗಿ ಆಟೊಮ್ಯಾಟಿಕ್ ಹಿಟ್ಟಿನ ಗಿರಣಿ

ಕೃಷಿ ಮೇಳದ ಸಾಕಷ್ಟು ಮಳಿಗೆಗಳಲ್ಲಿ ರಾಗಿ, ಅಕ್ಕಿ ಹಿಟ್ಟನ್ನು ಮನೆಯಲ್ಲಿಯೇ ತಯಾರಿಸಿಕೊಳ್ಳುವ ಯಂತ್ರಗಳು ಕಂಡುಬಂದವು. ಹಿಟ್ಟು ತಯಾರಿಸಲು ಹೊರಗೆ ಹೋಗುವ ಅವಶ್ಯಕತೆ ಇಲ್ಲ ಇದಕ್ಕಾಗಿ ಜರ್ಮನ್ ಟೆಕ್ನಾಲಜಿಯ ಸಂಪೂರ್ಣ ಆಟೊಮ್ಯಾಟಿಕ್ ಹಿಟ್ಟಿನ ಗಿರಣಿಗಳು ಬಂದಿವೆ. ಅರಿಶಿಣ, ಧನಿಯಾ ಪುಡಿಯಿಂದ ಹಿಡಿದು, ರಾಗಿ, ಗೋಧಿ, ಅಕ್ಕಿ ಕಡ್ಡಿಬೇಳೆ ಸೇರಿದಂತೆ ಎಲ್ಲಾ ಬಗೆಯ ಧಾನ್ಯಗಳನ್ನು ಈ ಹಿಟ್ಟಿನ ಗಿರಣಿಗಳಲ್ಲಿ ರುಬ್ಬಬಹುದು. ಅರ್ಧ ಕೆ.ಜಿ. ಒಂದು ಕೆ.ಜಿ.ಯಿರಲಿ, ಬೇಕೆಂದಾಗ ತಾಜಾ ಆಗಿ ಹಿಟ್ಟು ಮಾಡಿಕೊಳ್ಳಬಹುದು. ಇಂತಹ ಯಂತ್ರಗಳು ಮೇಳದಲ್ಲಿ ಕೊನೆಯ ದಿನ ಸಾಕಷ್ಟು ಮಳಿಗೆಗಳಲ್ಲಿ ಕಂಡು ಬಂದವು. ಇವುಗಳ ಬೆಲೆ ಸುಮಾರು 25 ಸಾವಿರ ರೂ.ಗಷ್ಟಿದ್ದು ಗ್ರಾಹಕರಿಗೆ ಹೆಚ್ಚು ಅನುಕೂಲಕರವಾಗಿದೆ.

ಮೇಳದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅಭಿಪ್ರಾಯ

ಉತ್ತಮ ಕೃಷಿ, ನವೋದ್ಯಮಗಳಿಗೆ ಪ್ರೋತ್ಸಾಹ ಅಗತ್ಯ

ಬೆಂಗಳೂರು: ಭಾರತೀಯ ಕೃಷಿ ಕ್ಷೇತ್ರದ ಪ್ರಗತಿಗೆ ಉತ್ತಮ ಕೃಷಿ ಪದ್ಧತಿ ಹಾಗೂ ರೈತ ಸ್ನೇಹಿ ಆಕ್ಷೇಶನ್‌ಗಳನ್ನು ಅಭಿವೃದ್ಧಿಪಡಿಸುವ ಮತ್ತು ನವೋದ್ಯಮಗಳನ್ನು ಉತ್ತೇಜಿಸುವ ಅಗತ್ಯವಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅಭಿಪ್ರಾಯ ವ್ಯಕ್ತಪಡಿಸಿದರು.

ಕೃಷಿ ಮೇಳದ 4ನೇ ದಿನವಾದ ಭಾನುವಾರ ಆಯೋಜಿಸಿದ್ದ ಸಮಾರೋಪ ಸಮಾರಂಭದಲ್ಲಿ ರೈತ ಸಾಧಕರನ್ನು ಸನ್ಮಾನಿಸಿ ಮಾತನಾಡಿದ ಅವರು, ಕೃಷಿ ಕ್ಷೇತ್ರದಲ್ಲಿ ಆಗುತ್ತಿರುವ ನೂತನ ಬೆಳವಣಿಗೆ, ಆವಿಷ್ಕಾರಗಳು, ಸಂಶೋಧನೆಗಳು ಮತ್ತು ಆಧುನಿಕ ಕೃಷಿ ಪದ್ಧತಿಗಳನ್ನು ರೈತರಿಗೆ ತಿಳಿಸಿಕೊಡಲು ಮೇಳಗಳು ಆತ್ಯ ವಶ್ಯಕವಾಗಿ ನಡೆಯಬೇಕೆಂದು ಎಂದು ಪ್ರತಿಪಾದಿಸಿದರು.

ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತದೆ. ಯುವಕರಲ್ಲಿ ಕೃಷಿಯ ಬಗ್ಗೆ ಒಲವು ಹೆಚ್ಚಿಸಲು ಮತ್ತು ಆರಿವು ಮೂಡಿಸಲು ಈ ರೀತಿಯ ಮೇಳಗಳು ಸಹಕಾರಿ. ನಾನು ಕೂಡ ಚಿಕ್ಕ ವಯಸ್ಸಿನಲ್ಲಿ ಪಾಲಕರೊಂದಿಗೆ ಹಲವು ಮೇಳಗಳಲ್ಲಿ ಭಾಗವಹಿಸಿದ್ದೇನೆ ಎಂದು ಕಮ್ಮ ಅನುಭವಗಳನ್ನು ಹಂಚಿಕೊಂಡರು.

ಈ ಹಿಂದೆ ಹಳ್ಳಿಗಳಲ್ಲಿ ಜಾತ್ರೆ ನಡೆಸುತ್ತಿದ್ದರು. ಇದರಲ್ಲಿ ಭಾಗವಹಿಸುವ ಮೂಲಕ ಸಂಪ್ರದಾಯದ ಜತೆಗೆ ಪರಸ್ಪರ ಆರ್ಥ ಮಾಡಿಕೊಳ್ಳಲು ಸಹಾಯವಾಗುತ್ತಿತ್ತು. ಆದೇ ಮಾದರಿಯಲ್ಲಿ ಕೃಷಿ ಮೇಳ ಭಾಗವಹಿಸಿದರೆ, ಆಧುನಿಕ ತಂತ್ರಜ್ಞಾನ ನೇರಿದಂತೆ ಕೃಷಿಯಲ್ಲಿ ಆಧುನಿಕ ಯಂತ್ರೋಪಕರಣಗಳ ಮಾಹಿತಿ ದೊರೆಯಲಿದೆ ಎಂದರು.

ಕಳೆದ 57 ವರ್ಷಗಳಲ್ಲಿ ವಿಶ್ವವಿದ್ಯಾಲಯವು 200ಕ್ಕೂ ಹೆಚ್ಚು ಪ್ರಭೇದಗಳನ್ನು ಮತ್ತು 334 ಇತರ ಕೃಷಿ ತಂತ್ರಜ್ಞಾನಗಳನ್ನು ಬಿಡುಗಡೆ ಮಾಡಿದೆ. ಕೃಷಿ ವಿಸ್ತರಣೆಗೆ ಸಂಬಂಧಿಸಿದಂತೆ, ವಿಶ್ವವಿದ್ಯಾಲಯವು ಅಭಿವೃದ್ಧಿಪಡಿಸಿದ ವಿಸ್ತರಣಾ ಮಾದರಿಯನ್ನು ದೇಶಾದ್ಯಂತ ಅಳವಡಿಸಿಕೊಳ್ಳಲಾಗಿದೆ. ಕೃಷಿ ವಿಜ್ಞಾನ ಕೇಂದ್ರವು ತಲಾ ಒಂದು ಗ್ರಾಮವನ್ನು ದತ್ತು ತೆಗೆದುಕೊಂಡು ಜಿಲ್ಲಾ ಮಟ್ಟದಲ್ಲಿ ಮಾದರಿ ಗ್ರಾಮವನ್ನಾಗಿ ಮಾರ್ಪಡಿಸುತ್ತಿರುವ ಕಾರ್ಯಕ್ಕೆ ಶ್ಲಾಘನೀಯ ಎಂದು ಹೇಳಿದರು.

ಕಡ್ಡಲದಲ್ಲೇ ಅಧಿನಂದನೆ: ಇದೇ ವೇಳೆ ಕೃಷಿ ವಿವಿ ಅಭಿವೃದ್ಧಿಪಡಿಸಿರುವ ನೂತನ ಹತ್ತು ತಳಗಳ ಪಾತ್ಯಕ್ಷಿಕೆಯನ್ನು ವೀಕ್ಷಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಜನರಿಗೆ ಕನ್ನಡದಲ್ಲೇ ಅಭಿನಂದನೆ ಸಲ್ಲಿಸಿ, ಕನ್ನಡ ಕಲಿಯುತ್ತಿರುವ ಬಗ್ಗೆ ತಿಳಿಸಿದರು.



ಮ್ಯಾಂಗೋ ಜಿಂಜರ್ ಇಡ್ಲಿ ಹಿಟ್ಟು

ಮೇಳದಲ್ಲಿ ಉಳಿದೆಯು ಆದ್ಯಾ ಸಂಸ್ಥೆಯು ತಯಾರಿಸಿರುವ ಮ್ಯಾಂಗೊ ಜಿಂಜರ್‌ನ ಇಡ್ಲಿ ಹಿಟ್ಟು ಇಡ್ಲಿ ಪ್ರಿಯರನ್ನು ಆಕರ್ಷಿಸಿತು. ಈ ಇಡ್ಲಿ ಸೇವನೆಯಿಂದ ಕಫ, ಶೀತ, ಧೂಳಿನ ಅಲರ್ಜಿ ಮತ್ತು ಚರ್ಮದ ಅಲರ್ಜಿಯಂತಹ ಕಾಯಿಲೆಗಳೂ ಮಂಪ್ಪಾಗಿದೆ. ಲೈಟ್ಕಡಿಯಾಗಿ ಬಳಸುವ ಮ್ಯಾಂಗೊ ಜಿಂಜರ್, ಕ್ಯಾರೆಟ್, ಬೀಟ್‌ರೂಟ್, ಕರಿಬೇವು ಮತ್ತಿತರ ಪದಾರ್ಥಗಳನ್ನು ಒಗಾಗಿಸಿ, ಪುಡಿ ಮಾಡಿದ ಇಡ್ಲಿ ಮಿಶ್ರಣದ ಹಿಟ್ಟನ್ನು ತಯಾರಿಸಲಾಗಿದೆ. ಈ ಇಡ್ಲಿ ಮಿಶ್ರಣದ ಪುಡಿಯ ಪೊಟ್ಟಣದ ಬೆಲೆ ಅರ್ಧ ಕೆ.ಜಿ.ಗೆ 97 ರೂ. ಇದ್ದು 20 ಇಡ್ಲಿಯವರೆಗೆ ತಯಾರಾಗುತ್ತದೆ. ಇದರಲ್ಲಿ ದೋಸೆಯನ್ನು ಕೂಡ ಮಾಡಬಹುದು ಎನ್ನುತ್ತಾರೆ ಸಂಸ್ಥೆಯ ಬಿ.ಎನ್. ಚಂದ್ರಶೇಖರ್ ಪಾಳ್ಕರ್.

ರಾಜ್ಯಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿ ಪ್ರದಾನ

ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ 7 ರೈತರಿಗೆ ರಾಜ್ಯಪಾಲರು ರಾಜ್ಯಮಟ್ಟದ ಪ್ರಶಸ್ತಿ ನೀಡಿ ಗೌರವಿಸಿದರು. ಹಾಸನದ ಆರಕಲಗೂಡು ತಾಲೂಕಿನ ದೊಡ್ಡ ಮಗ್ಗೆ ರೈತ ಎಂ.ಸಿ. ರಂಗಸ್ವಾಮಿ ಅವರಿಗೆ ಎಚ್.ಡಿ.ದೇವೇಗೌಡ ಅತ್ಯುತ್ತಮ ರಾಜ್ಯಮಟ್ಟದ ರೈತ ಪ್ರಶಸ್ತಿ, ಬೆಂ.ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕು ದೊಡ್ಡತುಮಕೂರು ರೈತ ಟಿ.ಎಂ.ಆರವಿಂದ ಅವರಿಗೆ ಡಾ. ಎಂ.ಎಸ್. ಮಂಜಗೌಡ ಅತ್ಯುತ್ತಮ ತೋಟಗಾರಿಕಾ ರೈತ ಪ್ರಶಸ್ತಿ, ಹಾಸನ ಜಿಲ್ಲೆ ಆಲೂರು ತಾಲೂಕಿನ ಯಡೂರು ರೈತ ಮಹಿಳೆ ವೈ.ಜ. ಮಂಜುಳ ಹಾಗೂ ಬೆಂ. ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಲಕ್ಷ್ಮೀದೇವಿಪುರದ ರೈತ ಸಿ. ನವಿಕ್ಷಮ್ ಅವರಿಗೆ ಕ್ಯಾನ್ ಬ್ಯಾಂಕ್ ಅತ್ಯುತ್ತಮ ರೈತ ಪ್ರಶಸ್ತಿ ಕೋಲಾರ ಜಿಲ್ಲೆ ಅರಾಣಗಹಳ್ಳಿ ರೈತ ಮುನಿರೆಡ್ಡಿ ಅವರಿಗೆ ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿ ನೀಡಲಾಗುತ್ತಿದೆ. ದೊಡ್ಡಬಳ್ಳಾಪುರದ ಹಾಡೋನಹಳ್ಳಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಹಿರಿಯ ವಿಜ್ಞಾನಿ ಡಾ. ವಿ.ಟಿ. ಮಲ್ಲಿಕಾರ್ಜುನಗೌಡ ಅವರಿಗೆ ಡಾ. ಆರ್. ದ್ವಾರಕೀನಾಥ್ ಅತ್ಯುತ್ತಮ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿ ಹಾಗೂ ಬಾಗಲಕೋಟೆ ತೋಟಗಾರಿಕಾ ವಿವಿ ಸಂಶೋಧನಾ ನಿರ್ದೇಶಕರಾದ ಡಾ. ಎಚ್.ಸಿ. ಮಹೇಶ್ವರಪ್ಪ ಅವರಿಗೆ ಡಾ. ಎಂ.ಎಸ್. ಮಂಜಗೌಡ ಅತ್ಯುತ್ತಮ ತೋಟಗಾರಿಕಾ ಸಂಶೋಧನಾ ರಾಷ್ಟ್ರಿಯ ದತ್ತಿ ಪ್ರಶಸ್ತಿ ಪ್ರದಾನ ಮಾಡಿದರು. ವಿವಿ ಕುಲಪತಿ ಡಾ.ರಾಜೇಂದ್ರ ಪ್ರಸಾದ್, ಕುಲಸಚಿವ ಡಾ.ಬಸವೇಗೌಡ, ವಿಸ್ತರಣಾ ನಿರ್ದೇಶಕರಾದ ಡಾ.ಎಸ್. ದೇವಮೂರ್ತಿ, ಸಂಶೋಧನಾ ನಿರ್ದೇಶಕರಾದ ಡಾ. ಪಡಾಕ್ಷರಿ, ವ್ಯವಸ್ಥಾಪನಾ ಮಂಡಳಿ ಸದಸ್ಯ ರಾಮೇಗೌಡ, ಆರವಿಂದ್, ಶ್ರೀರಾಮ್ ಇದ್ದರು.



15-11-2021
Uv Pg 03

Kaiser-i-Hind is Arunachal's State butterfly

The insect with a 90-120 mm wingspan is found in the eastern Himalayas

SPECIAL CORRESPONDENT
GUWAHATI

An elusive swallowtail butterfly carrying 'India' in its name and found in next-door China will become the State butterfly of Arunachal Pradesh.

The State Cabinet headed by Chief Minister Pema Khandu on Saturday approved the large, brightly coloured Kaiser-i-Hind as the State butterfly. The Cabinet meeting was for the first time held outside State capital Itanagar at an unusual location – Pakke Tiger Reserve.

The Cabinet also adopted the Pakke Tiger Reserve 2047 declaration on climate change-resilient and responsive Arunachal Pradesh aimed at lowering emissions and sustainable development.

Kaiser-i-Hind (*Teinopalpus imperialis*) literally means Emperor of India. This butterfly with a 90-120 mm wingspan is found in six States along the eastern Himalayas at elevations from 6,000-10,000 feet in well-wooded terrain.

The butterfly also flutters in Nepal, Bhutan, Myanmar, Laos, Vietnam and southern China.

The State Wildlife Board had in January 2020 accepted the proposal from Koj Rinya, the divisional forest officer of Hapoli Forest Division in the Lower Subansiri district to accept the Kaiser-i-Hind as the State butterfly. The proposal was made with a view to boosting butterfly tourism and saving the species from extinction in the State.


Winged beauty: *Teinopalpus imperialis.* ▪ SPECIAL ARRANGEMENT

Protected areas under the Hapoli Forest Division are popular with butterfly enthusiasts.

Although the Kaiser-i-Hind is protected under Schedule II of Wildlife (Protection) Act, 1972, it is hunted for supply to butterfly collectors.

Habitat conservation

According to Assam-based butterfly expert Monsoon Jyoti Gogoi, the species is confined to very few pockets of Arunachal Pradesh and could become extinct if not conserved.

"The State butterfly tag can translate into its habitat conservation," she said.

The first dead specimen of Kaiser-i-Hind was recorded in Sikkim by Usha Lachugpa, a senior forest official of the State, in 2012. It was captured live on camera by a few participants during a butterfly watching meet in Arunachal Pradesh's Talle Valley Wildlife Sanctuary in 2014.

15-11-2021
Hindu Pg 08